ಪ್ರಜಾಪ್ರಗತಿ, ದಿನಾಂಕ: 13/01/2018| ತುಮಕೂರು

# ರಾಷ್ಟ್ರೀಯ ಯುವ ಜನೋತ್ಸವ ಕಾರ್ಯಕ್ರಮ



ತುಮಕೂರು

ತುಮಕೂರಿನ ಶ್ರೀ ಸಿದ್ದಗಂಗಾ ಕಲಾ, ವಿಜ್ಞಾನ ವಾಣಿಜ್ಯಕಾಲೇಜಿನಲ್ಲಿ ವಿವೇಕಾನಂದ ಜಯಂತಿ ರಾಷ್ಟ್ರೀಯ ಯುವ ಜನೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಮುಖ್ಯಅತಿಥಿಗಳು ಮತ್ತು ಸಂಪನ್ಮೂಲ ವ್ಯಕ್ತಿಯಾಗಿ ತುಮಕೂರು ರಾಮಕೃಷ್ಣಾಶ್ರಮದ ಸ್ವಾಮಿ ಧೀರಾನಂದಜಿ ಭಾಗವಹಿಸಿ ಸ್ವಾಮಿ ವಿವೇಕಾನಂದ ಸಾಧನೆಗಳ ಜೀವನಚರಿತ್ರೆ ಹಾಗೂ ಯುವಜನರಲ್ಲಿ ಅವರು ಹಾಕಿಕೊಟ್ಟ ಮಾರ್ಗ ಹಾಗೂ ವಿವೇಕಾನಂದರ ಪ್ರಸ್ತುತತೆ ಬಗ್ಗೆ ಸುಧೀರ್ಘವಾಗಿ ತಮ್ಮ ಅಭಿಪ್ರಾಯವನ್ನು ಮಂಡಿಸಿದರು ಮತ್ತು ವಿದ್ಯಾರ್ಥಿಗಳಲ್ಲಿ ಮನಸ್ಸು, ಮಾತು ಮತ್ತು ಕೃತಿಯನ್ನು ರೂಪಿಸಿಕೊಳ್ಳುವಂತೆ ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಾದ ಚರಣ್‌ಕುಮಾರ್.ಜಿ.ಆರ್, ಕಾವ್ಯಟಿ.ಎಂ ಹಾಗೂ ಶ್ರೀಲತಾ ರವರು ವಿವೇಕಾನಂದರ ಜೀವನ ಆದರ್ಶಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು,

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಆರ್. ಆನಂದಕುಮಾರಿ ಅವರು ಸ್ವಾಮಿ ವಿವೇಕಾನಂದರು ಯುವ ಜನರಿಗೆ ಸ್ಫೂರ್ತಿ, ಪ್ರೇರಣೆ, ಧಾರ್ಮಿಕ ಪರಂಪರೆಯ ಮತ್ತು ನೈತಿಕತೆಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು. ಕಾರ್ಯಕ್ರಮದ ಅಂಗವಾಗಿ ಚರ್ಚಾಸ್ಪರ್ಧೆ ಏರ್ಪಡಿಸಲಾಗಿತ್ತು, ನಂತರ ವಿಜೇತರಿಗೆ ಬಹುಮಾನವನ್ನು ವಿತರಿಸಲಾಯಿತು. ಕಾರ್ಯಕ್ರಮದ ಆಯೋಜಕರಾದ ಯುವರೆಡ್ ಕ್ರಾಸ್ ಘಟಕದ ಸಂಚಾಲಕರಾದ ಕುಮಾರಸ್ವಾಮಿ. ಸಿ.ಎಸ್. ಮತ್ತು ಸಹ ಸಂಚಾಲಕರಾದ ಕುಮಾರಿ ಶೃತಿ.ಪಿ.ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಖಲೀದಾ ಖಾನಂ ಸ್ವಾಗತಿಸಿದರು, ರಾಮಲಿಂಗಾರೆಡ್ಡಿ ಇವರು ವಂದಿಸಿದರು, ಡಾ.ಶಿವಪ್ರಸಾದ್ ರವರು ನಿರೂಪಿಸಿದರು.

ವಿಜಯ ಕರ್ನಾಟಕ, ದಿನಾಂಕ - 13/01/2018| ತುಮಕೂರು

# ವಿವೇಕಾನಂದರು ಯುವಕರಿಗೆ ಆದರ್ಶ

**ವಿಕ ಸುದ್ದಿಲೋಕ** ತುಮಕೂರು

ಸ್ವಾಮಿ ವಿವೇಕಾನಂದರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಇಂದಿನ ಯುವ ಸಮುದಾಯ ನಡೆಯುವ ಅವಶ್ಯಕತೆ ಇದೆ ಎಂದು ರಾಮಕೃಷ್ಣ ಆಶ್ರಮದ ಅಧ್ಯಕ್ಷ ಧೀರಾನಂದಜೀ ಸ್ವಾಮಿ ತಿಳಿಸಿದರು.

ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸ್ವಾಮಿ ವಿವೇಕಾನಂದರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ, ಅವರು ನಡೆದು ಬಂದ ದಾರಿ ಬಗ್ಗೆ ಸವಿಸ್ತಾರವಾಗಿ ವಿದ್ಯಾರ್ಥಿಗಳಿಗೆ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಿನ್ಸಿಪಾಲ್ ಡಾ.ಆರ್.ಆನಂದಕುಮಾರಿ ಮಾತನಾಡಿ, ಸ್ವಾಮಿ ವಿವೇಕಾನಂದರು ಯುವಜನರಿಗೆ ಸ್ಫೂರ್ತಿ, ಪ್ರೇರಣೆಯಾಗಿದ್ದು ಅವರ ಆದರ್ಶ ಗುಣಗಳನ್ನು ಬೆಳೆಸಿಕೊಳ್ಳಬೇಕಾಗಿದೆ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.



ತುಮಕೂರಿನ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಸ್ವಾಮಿ ವಿವೇಕಾನಂದರ ಜನ್ಮದಿನ ಆಚರಿಸಲಾಯಿತು.

ವಿದ್ಯಾರ್ಥಿಗಳಾದ ಚರಣ್‌ಕುಮಾರ್, ಕಾವ್ಯ, ಲತಾ ಸ್ವಾಮಿ ವಿವೇಕಾನಂದರ ಜೀವನ ಆದರ್ಶಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಸ್ವಾಮಿ ವಿವೇಕಾನಂದರ ಜನ್ಮದಿನದ ಆಚರಣೆ ಅಂಗವಾಗಿ ಚರ್ಚಾ ಸ್ಪರ್ಧೆ ಏರ್ಪಡಿಸಲಾಗಿತ್ತು. ನಂತರ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದ ಆಯೋಜಕರಾದ ಯುವರೆಡ್ ಕ್ರಾಸ್‌ಘಟಕದ ಸಂಚಾಲಕ ಕುಮಾರಸ್ವಾಮಿ, ಶೃತಿ, ಖಲೀದಾ ಖಾನಂ, ರಾಮಲಿಂಗಾರೆಡ್ಡಿ, ಡಾ.ಶಿವಪ್ರಸಾದ್ ಉಪಸ್ಥಿತರಿದ್ದರು.

Scanned with ACE Scanner

3
ಬೆಂಗಳೂರು ಉದಯವಾಣಿ
ಶನಿವಾರ, ಜನವರಿ 13, 2018

# ಹಾಸನ-ತುಮಕೂರು

# ವಿವೇಕಾನಂದರ ಆದರ್ಶ ಜೀವಂತ

**ತುಮಕೂರು:** ಯುಗ ಪ್ರವರ್ತಕ ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಇಂದಿನ ಯುವ ಸಮೂಹ ಅನುಸರಿಸಬೇಕಾಗಿದೆ ಎಂದು ರಾಮಕೃಷ್ಣಾಶ್ರಮದ ಸ್ವಾಮಿ ಧೀರಾನಂದಜಿ ಹೇಳಿದರು.

ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ವಾಣಿಜ್ಯ ಕಾಲೇಜಿನಲ್ಲಿ ಶುಕ್ರವಾರ ಏರ್ಪಡಿಸಿದ್ದ ವಿವೇಕಾನಂದ ಜಯಂತಿ ರಾಷ್ಟ್ರೀಯ ಯುವ ಜನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸ್ವಾಮಿ ವಿವೇಕಾನಂದ ಸಾಧನೆಗಳ ಬಗ್ಗೆ ಇಂದಿನ ಯುವ ಸಮುದಾಯ ಅರಿಯಬೇಕಾಗಿದೆ. ದೇಶದ ಸಂಸ್ಕೃತಿ ಪರಂಪರೆಯನ್ನು ವಿಶ್ವಕ್ಕೆ ಸಾರಿದ ಮಹಾ ಪುರುಷ ವಿವೇಕಾನಂದರು ಎಂದು ಹೇಳಿದರು.

ಏಳಿ ಎದ್ದೇಳಿ ಗುರಿ ಮುಟ್ಟುವವರೆಗೂ ನಿಲ್ಲದಿರಿ ಎಂದು ಯುವಕರಿಗೆ ಕರೆ ನೀಡಿದ ಸ್ವಾಮಿ ವಿವೇಕಾನಂದರ ಜೀವನಚರಿತ್ರೆ ಹಾಗೂ ಯುವ ಜನರಲ್ಲಿ ಅವರು ಹಾಕಿಕೊಟ್ಟ ಮಾರ್ಗ ಹಾಗೂ ವಿವೇಕಾನಂದರ ಪ್ರಸ್ತುತತೆ ಬಗ್ಗೆ ತಿಳಿಸಿದ ಅವರು, ವಿದ್ಯಾರ್ಥಿಗಳು ಮನಸ್ಸು, ಮಾತು ಮತ್ತು ಕೃತಿಯನ್ನು ರೂಪಿಸಿಕೊಳ್ಳುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಾದ ಚರಣ್‌ಕುಮಾರ್.ಜಿ.ಆರ್, ಕಾವ್ಯಟಿ.ಎಂ ಹಾಗೂ ಶ್ರೀಲತಾ ವಿವೇಕಾನಂದರ ಜೀವನ ಆದರ್ಶಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಆರ್.ಆನಂದಕುಮಾರಿ ಮಾತನಾಡಿ, ಸ್ವಾಮಿ ವಿವೇಕಾನಂದರು ಯುವಜನರಿಗೆ ಸ್ಫೂರ್ತಿ, ಪ್ರೇರಣೆ, ಧಾರ್ಮಿಕ ಪರಂಪರೆಯ, ಮತ್ತು ನೈತಿಕತೆಯ ಬಗ್ಗೆ ತಿಳಿಸಿದರು.

ವಿವೇಕಾನಂದರ ಜಯಂತಿ ಅಂಗವಾಗಿ ನಡೆದ ಚರ್ಚಾ ಸ್ಪರ್ಧೆ ಏರ್ಪಡಿಸಲಾಗಿತ್ತು ಅದರಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು. ಯುವ ರೆಡ್‌ಕ್ರಾಸ್ ಘಟಕದ ಸಂಚಾಲಕರಾದ ಸಿ.ಎಸ್. ಕುಮಾರಸ್ವಾಮಿ, ಪಿ ಶೃತಿ, ಖಲೀದಾ ಖಾನಂ, ರಾಮಲಿಂಗಾರೆಡ್ಡಿ, ಡಾ.ಶಿವಪ್ರಸಾದ್ ಇತರರು ಇದ್ದರು.

ಜ ಯಂ ತಿ...



ತುಮಕೂರಿನ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ವಾಣಿಜ್ಯ ಕಾಲೇಜಿನಲ್ಲಿ ಶುಕ್ರವಾರ ಏರ್ಪಡಿಸಿದ್ದ ವಿವೇಕಾನಂದ ಜಯಂತಿ ರಾಷ್ಟ್ರೀಯ ಯುವ ಜನೋತ್ಸವ ಕಾರ್ಯಕ್ರಮದಲ್ಲಿ ಗಣ್ಯರು ಭಾಗವಹಿಸಿದ್ದರು.

Scanned with ACE Scanner

# ವಿವಿಯ ಚಿನ್ನದ ಪದಕ ವಿಜೇತರಿಗೆ ಪುರಸ್ಕಾರ

## ಪೋಷಕರ ಕನಸು ನನಸು ಮಾಡುವ ನಿಟ್ಟಿನಲ್ಲಿ ಓದಿ: ಮುರಳೀಧರ ಹಾಲಪ್ಪ

**ತುಮಕೂರು:** ಮಕ್ಕಳು ಸಾಮಾಜಿಕ ಜಾಲತಾಣಗಳಿಗೆ ನೀಡುವ ಮಹತ್ವವನ್ನು ಅವರ ಓದಿನ ಕಡೆಗೂ ನೀಡುವ ಮೂಲಕ ತಂದೆ, ತಾಯಿ, ಪೋಷಕರ ಆಕಾಂಕ್ಷೆಗಳನ್ನು ಈಡೇರಿಸಬೇಕೆಂದು ಕರ್ನಾಟಕ ರಾಜ್ಯ ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷ ಮುರಳೀಧರ ಹಾಲಪ್ಪ ಸಲಹೆ ನೀಡಿದರು.

ಅವರು ನಗರದ ಸಿದ್ಧಗಂಗಾ ಮಹಿಳಾ ಪದವಿ ಕಾಲೇಜಿನಲ್ಲಿ ತುಮಕೂರು ವಿವಿಯಿಂದ ಚಿನ್ನದ ಪದಕ ವಿಜೇತ ಮಕ್ಕಳಿಗೆ ಹಾಲಪ್ಪ ಪ್ರತಿಷ್ಠಾನದ ವತಿಯಿಂದ ಏರ್ಪಡಿಸಿದ್ದ ಪ್ರತಿಭಾಪುರಸ್ಕಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡುತ್ತಾ ಪ್ರತಿಯೊಬ್ಬ ತಂದೆ ತಾಯಿಗೂ ನನ್ನ ಮಗ ಓರ್ವ ಐಎಎಸ್, ಐಪಿಎಸ್, ಕೆ.ಎ.ಎಸ್. ಅಧಿಕಾರಿಯಾಗಬೇಕು, ವಿಜ್ಞಾನಿ ಯಾಗಬೇಕೆಂಬ ಕನಸು ಕಾಣುವುದು ಸಹಜ. ಅವರ ಕನಸು ನನಸು ಮಾಡುವ ನಿಟ್ಟಿನಲ್ಲಿ ನೀವೆಲ್ಲರೂ ಕಾರ್ಯೋನ್ಮುಖರಾಗಬೇಕು ಎಂದು ಹೇಳಿದರು.

ಇಂದು ದೇಶದ ಆಡಳಿತದ ಚುಕ್ಕಾಣಿ ಹಿಡಿದಿರುವ ಬಹುತೇಕ ಐಎಎಸ್ ಅಧಿಕಾರಿಗಳಲ್ಲಿ ರ್‍ಯಾಂಕ್ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ. ಆದರೆ ಅವರು ಜೀವನದಲ್ಲಿ ತೆಗೆದುಕೊಂಡು ನಿರ್ಧಾರಗಳು ಮತ್ತು ನಿರಂತರ ಅಭ್ಯಾಸ ಅವರನ್ನು ಈ ಹುದ್ದೆಗೆ ತಂದು ಕೂರಿಸಿದೆ. ಇಂದು ನಿಮ್ಮ ಮುಂದೆ ಸನ್ಮಾನ ಗೊಳ್ಳುತ್ತಿರುವ ಚಿನ್ನದಪದಕ ವಿಜೇತರನ್ನೇ ಮಾದರಿಯಾಗಿಟ್ಟುಕೊಂಡು ನೀವೂ ಓದಿ ಉತ್ತಮ ಅಂಕ ಪಡೆಯುವ ಮೂಲಕ ನಿಮ್ಮ ತಂದೆ ತಾಯಿಗಳಿಗೆ ಒಳ್ಳೆಯ ಉಡುಗೋರೆ ನೀಡಿ ಎಂದರು.



**ತುಮಕೂರಿನ ಸಿದ್ಧಗಂಗಾ ಮಹಿಳಾ ಪದವಿ ಕಾಲೇಜಿನಲ್ಲಿ ತುಮಕೂರು ವಿವಿಯಿಂದ ಚಿನ್ನದ ಪದಕ ವಿಜೇತ ಮಕ್ಕಳಿಗೆ ಹಾಲಪ್ಪ ಪ್ರತಿಷ್ಠಾನದ ವತಿಯಿಂದ ಏರ್ಪಡಿಸಿದ್ದ ಪ್ರತಿಭಾಪುರಸ್ಕಾರ ಕಾರ್ಯಕ್ರಮದಲ್ಲಿ ಚಿನ್ನದ ಪದಕ ವಿಜೇತರಾದ ಅಮೀನ್ ಬಿಸ್ತಾ, ಎಂ.ಕೆ.ಶ್ವೇತಾ, ಮಾನಸ ಅವರನ್ನು ಹಾಲಪ್ಪ ಪ್ರತಿಷ್ಠಾನದ ವತಿಯಿಂದ ಅಭಿನಂದಿಸಿದರು.**

ಈ ವೇಳೆ ಚಿನ್ನದ ಪದಕ ವಿಜೇತರಾದ ಅಮೀನ್ ಬಿಸ್ತಾ, ಎಂ.ಕೆ. ಶ್ವೇತಾ, ಮಾನಸ ಅವರುಗಳನ್ನು ಹಾಲಪ್ಪ ಪ್ರತಿಷ್ಠಾನದ ವತಿಯಿಂದ ಅಭಿನಂದಿಸಿದರು.

ವೇದಿಕೆಯಲ್ಲಿ ವಕ್ಫ್‌ಬೋರ್ಡ್ ಮಾಜಿ ಅಧ್ಯಕ್ಷ ಮುಸ್ತಾಕ್ ಅಹಮದ್, ಕಾಲೇಜಿನ ಪ್ರಾಂಶುಪಾಲ ಡಾ. ಆನಂದಕುಮಾರಿ, ಉಪನ್ಯಾಸಕರಾದ ಕುಮಾರ ಸ್ವಾಮಿ, ದೇವರಾಜು ಉಪಸ್ಥಿತರಿದ್ದರು.

Scanned with ACE Scanner

# ವಿದ್ಯಾರ್ಥಿಗಳು ಓದಿಗೂ, ಸಾಮಾಜಿಕ ಜಾಲತಾಣದಷ್ಟೇ ಮಹತ್ವ ನೀಡಿ



ತುಮಕೂರು: ಮಕ್ಕಳು ಸಾಮಾಜಿಕ ಜಾಲತಾಣಗಳಿಗೆ ನೀಡುವ ಮಹತ್ವವನ್ನು ಅವರ ಓದಿನ ಕಡೆಗೂ ನೀಡುವ ಮೂಲಕ ತಂದೆ, ತಾಯಿ, ಪೋಷಕರು ಆಕಾಂಕ್ಷೆಗಳನ್ನು ಈಡೇರಿಸಬೇಕೆಂದು ಕರ್ನಾಟಕ ರಾಜ್ಯ ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷ ಮುರುಳೀಧರ ಹಾಲಪ್ಪ ಸಲಹೆ ನೀಡಿದ್ದಾರೆ.

ತುಮಕೂರಿನ ಶ್ರೀಸಿದ್ಧಗಂಗಾ ಮಹಿಳಾ ಪದವಿ ಕಾಲೇಜಿನಲ್ಲಿ ತುಮಕೂರು ವಿವಿಯಿಂದ ಚಿನ್ನದ ಪದಕ ವಿಜೇತ ಮಕ್ಕಳಿಗೆ ಹಾಲಪ್ಪ ಪ್ರತಿಷ್ಠಾನದವತಿಯಿಂದ ಆಯೋಜಿಸಿದ್ದ ಪ್ರತಿಭಾಪುರಸ್ಕಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡುತ್ತಿದ್ದ ಅವರು,ಪ್ರತಿಯೊಬ್ಬ ತಂದೆ ತಾಯಿಗೂ ನನ್ನ ಮಗ ಓರ್ವ ಐಎಎಸ್, ಐಪಿಎಸ್, ಕೆ.ಎ.ಎಸ್.ಅಧಿಕಾರಿಯಾಗಬೇಕು, ವಿಜ್ಞಾನಿ ಯಾಗಬೇಕೆಂಬ ಕನಸು ಕಾಣುವುದು ಸಹಜ.ಅವರ ಕನಸು ನನಸು ಮಾಡುವ ನಿಟ್ಟಿನಲ್ಲಿ ನೀವೆಲ್ಲರೂ ಕಾರ್ಯೋನ್ಮು ಖರಾಗ ಬೇಕು ಎಂದರು.

ಇಂದು ದೇಶದ ಆಡಳಿತದ ಚುಕ್ಕಾಣಿ ಹಿಡಿದಿರುವ ಬಹುತೇಕ ಐಎಎಸ್ ಅಧಿಕಾರಿಗಳಲ್ಲಿ ರ್‍ಯಾಂಕ್ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ. ಆದರೆ ಅವರು ಜೀವನದಲ್ಲಿ ತೆಗೆದುಕೊಂಡು ನಿರ್ಧಾರಗಳು ಮತ್ತು ನಿರಂತರ ಅಭ್ಯಾಸ ಅವರನ್ನು ಈ ಹುದ್ದೆಗೆ ತಂದು ಕೂರಿಸಿದೆ.ಇಂದು ನಿಮ್ಮ ಮುಂದೆ ಸನ್ಮಾನಗೊಳ್ಳುತ್ತಿರುವ ಚಿನ್ನದಪದಕ ವಿಜೇತರನ್ನೇ ಮಾದರಿಯಾಗಿಟ್ಟುಕೊಂಡು ನೀವೂ ಓದಿ ಉತ್ತಮ ಅಂಕ ಪಡೆಯುವ ಮೂಲಕ ನಿಮ್ಮ ತಂದೆ ತಾಯಿಗಳಿಗೆ ಒಳ್ಳೆಯ ಉಡುಗೋರೆ ನೀಡಿ ಎಂದು ಹಾಲಪ್ಪ ತಿಳಿಸಿದರು.

ವೇದಿಕೆಯಲ್ಲಿ ವಕ್ಫ್‌ಬೋರ್ಡ್ ಮಾಜಿ ಅಧ್ಯಕ್ಷ ಮುಸ್ತಾಕ್ ಅಹಮದ್,ಕಾಲೇಜಿನ ಪ್ರಾಂಶುಪಾಲರಾದ ಡಾ.ಆನಂದಕುಮಾರಿ, ಉಪನ್ಯಾಸಕರಾದ ಕುಮಾರಸ್ವಾಮಿ,ದೇವರಾಜು ಉಪಸ್ಥಿತರಿದ್ದರು.ರ್‍ಯಾಂಕ್ ವಿಜೇತರಾದ ಅಮೀನ್ ಬಿಸ್ತಾ,ಶ್ವೇತಾ.ಎಂ.ಕೆ., ಮಾನಸ ಅವರುಗಳನ್ನು ಹಾಲಪ್ಪ ಪ್ರತಿಷ್ಠಾನದವತಿಯಿಂದ ಅಭಿನಂದಿಸಲಾಯಿತು.

ದಿ. 6.2.18/

Scanned with ACE Scanner

ಕನ್ನಡಪ್ರಭ
ಮಂಗಳವಾರ 6.2.2018

ಸಣ್ ಸುದ್ದಿ

## ಓದಿಗೂ ಸಾಮಾಜಿಕ ಜಾಲತಾಣದಷ್ಟೇ ಮಹತ್ವ ನೀಡಿ: ಹಾಲಪ್ಪ



ತುಮಕೂರು ವಿವಿಯಿಂದ ಚಿನ್ನದ ಪದಕ ಪಡೆದ ಮಕ್ಕಳಿಗೆ ಹಾಲಪ್ಪ ಪ್ರತಿಷ್ಠಾನದ ವತಿಯಿಂದ ಗೌರವಿಸಲಾಯಿತು.

**ತುಮಕೂರು:** ಮಕ್ಕಳು ಸಾಮಾಜಿಕ ಜಾಲತಾಣಗಳಿಗೆ ನೀಡುವ ಮಹತ್ವವನ್ನು ಅವರ ಓದಿನ ಕಡೆಗೂ ನೀಡುವ ಮೂಲಕ ತಂದೆ, ತಾಯಿ,ಪೋಷಕರು ಆಕಾಂಕ್ಷೆಗಳನ್ನು ಈಡೇರಿಸಬೇಕೆಂದು ಕರ್ನಾಟಕ ರಾಜ್ಯ ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷ ಮುರುಳೀಧರ ಹಾಲಪ್ಪ ಸಲಹೆ ನೀಡಿದ್ದಾರೆ. ತುಮಕೂರಿನ ಶ್ರೀ ಸಿದ್ದಗಂಗಾ ಮಹಿಳಾ ಪದವಿ ಕಾಲೇಜಿನಲ್ಲಿ ತುಮಕೂರು ವಿವಿಯಿಂದ ಚಿನ್ನದ ಪದಕ ವಿಜೇತ ಮಕ್ಕಳಿಗೆ ಹಾಲಪ್ಪ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಪ್ರತಿಯೊಬ್ಬ ತಂದೆ ತಾಯಿಗೂ ನನ್ನ ಮಗ ಓರ್ವ ಐಎಎಸ್, ಐಪಿಎಸ್, ಕೆ.ಎ.ಎಸ್.ಅಧಿಕಾರಿಯಾಗ ಬೇಕು, ವಿಜ್ಞಾನಿಯಾಗಬೇಕೆಂಬ ಕನಸು ಕಾಣುವುದು ಸಹಜ. ಅವರ ಕನಸು ನನಸು ಮಾಡುವ ನಿಟ್ಟಿನಲ್ಲಿ ನೀವೆಲ್ಲರೂ ಕಾರ್ಯೋನ್ಮುಖರಾಗಬೇಕು ಎಂದರು. ಇಂದು ನಿಮ್ಮ ಮುಂದೆ ಸನ್ಮಾನಗೊಳ್ಳುತ್ತಿರುವ ಚಿನ್ನದ ಪದಕ ವಿಜೇತರನ್ನೇ ಮಾದರಿಯಾಗಿಟ್ಟುಕೊಂಡು ನೀವೂ ಓದಿ ಉತ್ತಮ ಅಂಕ ಪಡೆಯುವ ಮೂಲಕ ನಿಮ್ಮ ತಂದೆ ತಾಯಿಗಳಿಗೆ ಒಳ್ಳೆಯ ಉಡುಗೋರೆ ನೀಡಿ ಎಂದು ಹಾಲಪ್ಪ ತಿಳಿಸಿದರು. ವೇದಿಕೆಯಲ್ಲಿ ವಕ್ಫ್ ಬೋರ್ಡ್ ಮಾಜಿ ಅಧ್ಯಕ್ಷ ಮುಸ್ತಾಕ್ ಅಹಮದ್, ಪ್ರಾಂಶುಪಾಲ ಡಾ. ಆನಂದಕುಮಾರಿ, ಉಪನ್ಯಾಸಕರಾದ ಕುಮಾರಸ್ವಾಮಿ, ದೇವರಾಜು ಉಪಸ್ಥಿತರಿದ್ದರು. ರ್‍ಯಾಂಕ್ ವಿಜೇತರಾದ ಅಮೀನ್ ಬಿಸ್ತಾ, ಶ್ವೇತಾ ಎಂ.ಕೆ., ಮಾನಸ ಅವರನ್ನು ಹಾಲಪ್ಪ ಪ್ರತಿಷ್ಠಾನದ ವತಿಯಿಂದ ಅಭಿನಂದಿಸಲಾಯಿತು.

6.12.18
ಸಂಯುಕ್ತ ಕರ್ನಾಟಕ
ಮಂಗಳವಾರ

## ಸಾಮಾಜಿಕ ಜಾಲತಾಣದಂತೆ ಓದಿಗೂ ಒತ್ತು ನೀಡಿ

ಸಂ.ಕ.ಸಮಾಚಾರ, ತುಮಕೂರು

ಮಕ್ಕಳು ಸಾಮಾಜಿಕ ಜಾಲತಾಣಗಳಿಗೆ ನೀಡುವ ಮಹತ್ವವನ್ನು ಓದಿನ ಕಡೆಗೂ ನೀಡುವ ಮೂಲಕ ತಂದೆ, ತಾಯಿ ಹಾಗೂ ಪೋಷಕರು ಆಕಾಂಕ್ಷೆಗಳನ್ನು ಈಡೇರಿಸಬೇಕೆಂದು ರಾಜ್ಯ ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷ ಮುರುಳೀಧರ ಹಾಲಪ್ಪ ಸಲಹೆ ನೀಡಿದರು.

ನಗರದ ಸಿದ್ಧಗಂಗಾ ಮಹಿಳಾ ಪದವಿ ಕಾಲೇಜಿನಲ್ಲಿ ತುಮಕೂರು ವಿ.ವಿಯಿಂದ ಚಿನ್ನದ ಪದಕ ವಿಜೇತ ಮಕ್ಕಳಿಗೆ ಹಾಲಪ್ಪ ಪ್ರತಿಷ್ಠಾನದಿಂದ ಆಯೋಜಿಸಿದ್ದ ಪ್ರತಿಭಾಪುರಸ್ಕಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಪ್ರತಿಯೊಬ್ಬ ತಂದೆ, ತಾಯಿಗೂ ತಮ್ಮ ಮಗ ಓರ್ವ ಐಎಎಸ್, ಐಪಿಎಸ್, ಕೆ.ಎ.ಎಸ್ ಅಧಿಕಾರಿ ಅಥವಾ ವಿಜ್ಞಾನಿಯಾಗಬೇಕೆಂಬ ಕನಸು ಇರುವುದು ಸಹಜ. ಅವರ ಕನಸು ನನಸು ಮಾಡುವಲ್ಲಿ ನೀವೆಲ್ಲರೂ ಕಾರ್ಯೋನ್ಮುಖರಾಗಬೇಕು ಎಂದು ಹೇಳಿದರು.

ದೇಶದ ಆಡಳಿತದ ಚುಕ್ಕಾಣಿ ಹಿಡಿದಿರುವ ಬಹುತೇಕ ಐಎಎಸ್ ಅಧಿಕಾರಿಗಳಲ್ಲಿ ರ್‍ಯಾಂಕ್ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆ. ಆದರೆ, ಅವರು ಜೀವನದಲ್ಲಿ ತೆಗೆದುಕೊಂಡ ನಿರ್ಧಾರಗಳು ಮತ್ತು ನಿರಂತರ ಅಭ್ಯಾಸ ಅವರನ್ನು ಈ ಹುದ್ದೆಗೆ ತಂದು ಕೂರಿಸಿದೆ. ಇಂದು ನಿಮ್ಮ ಮುಂದೆ ಸನ್ಮಾನಗೊಳ್ಳುತ್ತಿರುವ ಚಿನ್ನದಪದಕ ವಿಜೇತರನ್ನೇ ಮಾದರಿಯಾಗಿಟ್ಟುಕೊಂಡು ಓದಿ, ಉತ್ತಮ ಅಂಕ ಪಡೆದು ತಂದೆ, ತಾಯಿಗಳಿಗೆ ಒಳ್ಳೆಯ ಉಡುಗೋರೆ ನೀಡಿ ಎಂದು ಸಲಹೆ ನೀಡಿದರು.ವಕ್ಫ್‌ಬೋರ್ಡ್ ಮಾಜಿ ಅಧ್ಯಕ್ಷ ಮುಸ್ತಾಕ್. ಅಹಮದ್, ಕಾಲೇಜಿನ ಪ್ರಾಚಾರ್ಯ ಡಾ.ಆನಂದಕುಮಾರಿ, ಉಪನ್ಯಾಸಕರಾದ ಕುಮಾರಸ್ವಾಮಿ, ದೇವರಾಜು ಉಪಸ್ಥಿತರಿದ್ದರು. ರ್‍ಯಾಂಕ್ ವಿಜೇತರಾದ ಅಮೀನ್ ಬಿಸ್ತಾ, ಎಂ.ಕೆ.ಶ್ವೇತಾ, ಮಾನಸಾಗೆ ಅಭಿನಂದಿಸಲಾಯಿತು.



ತುಮಕೂರು ವಿ.ವಿಯಿಂದ ಚಿನ್ನದ ಪದಕ ವಿಜೇತ ಅಮೀನ್ ಬಿಸ್ತಾ, ಎಂ.ಕೆ.ಶ್ವೇತಾ, ಮಾನಸಾಗೆ ರಾಜ್ಯ ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷ ಮುರಳೀಧರ ಹಾಲಪ್ಪ ಅಭಿನಂದಿಸಿದರು.

Scanned with ACE Scanner

ದಿ-6-02-2018. ವಿಜಯಕರ್ನಾಟಕ. ಮಂಗಳವಾರ

# ಓದಿನ ಕಡೆಗೂ ಮಹತ್ವ ನೀಡಿ: ಹಾಲಪ್ಪ



ತುಮಕೂರಿನ ಸಿದ್ಧಗಂಗಾ ಮಹಿಳಾ ಪದವಿ ಕಾಲೇಜಿನಲ್ಲಿ ತುಮಕೂರು ವಿವಿಯಿಂದ ಚಿನ್ನದ ಪದಕ ವಿಜೇತ ಮಕ್ಕಳಿಗೆ ಹಾಲಪ್ಪ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರದಲ್ಲಿ ಸನ್ಮಾನಿಸಲಾಯಿತು.

**ವಿಕ ಸುದ್ದಿಲೋಕ** ತುಮಕೂರು

ಮಕ್ಕಳು ಸಾಮಾಜಿಕ ಜಾಲತಾಣಗಳಿಗೆ ನೀಡುವ ಮಹತ್ವವನ್ನು ಓದಿನ ಕಡೆಗೂ ನೀಡುವ ಮೂಲಕ ಪೋಷಕರ ಆಕಾಂಕ್ಷೆಗಳನ್ನು ಈಡೇರಿಸಬೇಕೆಂದು ಕರ್ನಾಟಕ ರಾಜ್ಯ ಕೌಶಲಾಭಿವೃದ್ಧಿ ನಿಗಮದ ಅಧ್ಯಕ್ಷ ಮುರುಳೀಧರ ಹಾಲಪ್ಪ ಹೇಳಿದರು.

ನಗರದ ಸಿದ್ಧಗಂಗಾ ಮಹಿಳಾ ಪದವಿ ಕಾಲೇಜಿನಲ್ಲಿ ತುಮಕೂರು ವಿವಿಯಿಂದ ಚಿನ್ನದ ಪದಕ ವಿಜೇತ ಮಕ್ಕಳಿಗೆ ಹಾಲಪ್ಪ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಪ್ರತಿಯೊಬ್ಬ ತಂದೆ ತಾಯಿಯೂ ತಮ್ಮ ಮಕ್ಕಳು ಐಎಎಸ್, ಐಪಿಎಸ್, ಕೆಎಎಸ್ ಅಧಿಕಾರಿ, ವಿಜ್ಞಾನಿಯಾಗಬೇಕೆಂಬ ಕನಸು ಕಾಣುವುದು ಸಹಜ. ಅವರ ಕನಸು ನನಸು ಮಾಡುವ ನಿಟ್ಟಿನಲ್ಲಿ ನೀವೆಲ್ಲರೂ ಕಾರ್ಯೋನ್ಮುಖರಾಗಬೇಕು ಎಂದರು.

ಇಂದು ದೇಶದ ಆಡಳಿತದ ಚುಕ್ಕಾಣಿ ಹಿಡಿದಿರುವ ಬಹುತೇಕ ಐಎಎಸ್ ಅಧಿಕಾರಿಗಳಲ್ಲಿ ರ್‍ಯಾಂಕ್ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ. ಆದರೆ ಅವರು ಜೀವನದಲ್ಲಿ ತೆಗೆದುಕೊಂಡು ನಿರ್ಧಾರಗಳು ಮತ್ತು ನಿರಂತರ ಅಭ್ಯಾಸ ಅವರನ್ನು ಈ ಹುದ್ದೆಗೆ ತಂದು ಕೂರಿಸಿದೆ. ಇಂದು ನಿಮ್ಮ ಮುಂದೆ ಸನ್ಮಾನಗೊಳ್ಳುತ್ತಿರುವ ಚಿನ್ನದ ಪದಕ ವಿಜೇತರನ್ನೇ ಮಾದರಿಯಾಗಿಟ್ಟುಕೊಂಡು ನೀವೂ ಓದಿ ಉತ್ತಮ ಅಂಕ ಪಡೆಯುವ ಮೂಲಕ ನಿಮ್ಮ ತಂದೆ ತಾಯಿಗಳಿಗೆ ಒಳ್ಳೆಯ ಉಡುಗೊರೆ ನೀಡಿ ಎಂದು ತಿಳಿಸಿದರು.

ವಕ್ಫ್ ಬೋರ್ಡ್ ಮಾಜಿ ಅಧ್ಯಕ್ಷ ಮುಸ್ತಾಕ್ ಅಹಮದ್, ಕಾಲೇಜಿನ ಪ್ರಿನ್ಸಿಪಾಲ್ ಡಾ.ಆನಂದಕುಮಾರಿ, ಉಪನ್ಯಾಸಕ ಕುಮಾರಸ್ವಾಮಿ, ದೇವರಾಜು ಉಪಸ್ಥಿತರಿದ್ದರು.

ರ್‍ಯಾಂಕ್ ವಿಜೇತರಾದ ಅಮೀನ್ ಬಿಸ್ತಾ, ಶ್ವೇತಾ, ಮಾನಸ ಅವರನ್ನು ಹಾಲಪ್ಪ ಪ್ರತಿಷ್ಠಾನದ ವತಿಯಿಂದ ಅಭಿನಂದಿಸಲಾಯಿತು.

ದಿ-6-02-2018. ಗಂಗಾ ವಾಹಿನಿ ದಿನಪತ್ರಿಕೆ. ಮಂಗಳವಾರ

# ವಿದ್ಯಾರ್ಥಿಗಳು ಓದಿಗೂ ಸಾಮಾಜಿಕ ಜಾಲತಾಣದಷ್ಟೇ ಮಹತ್ವ ನೀಡಿ



ತುಮಕೂರು, ಫೆ.5 – ಮಕ್ಕಳು ಸಾಮಾಜಿಕ ಜಾಲತಾಣಗಳಿಗೆ ನೀಡುವ ಮಹತ್ವವನ್ನು ಅವರ ಓದಿನ ಕಡೆಗೂ ನೀಡುವ ಮೂಲಕ ತಂದೆ, ತಾಯಿ, ಪೋಷಕರು ಆಕಾಂಕ್ಷೆಗಳನ್ನು ಈಡೇರಿಸಬೇಕೆಂದು ಕರ್ನಾಟಕ ರಾಜ್ಯ ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷ ಮುರುಳೀಧರ ಹಾಲಪ್ಪ ಸಲಹೆ ನೀಡಿದರು.

ತುಮಕೂರಿನ ಶ್ರೀಸಿದ್ದಗಂಗಾ ಮಹಿಳಾ ಪದವಿ ಕಾಲೇಜಿನಲ್ಲಿ ತುಮಕೂರು ವಿವಿಯಿಂದ ಚಿನ್ನದ ಪದಕ ವಿಜೇತ ಮಕ್ಕಳಿಗೆ ಹಾಲಪ್ಪ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಪ್ರತಿಭಾಪುರಸ್ಕಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡುತ್ತಿದ್ದ ಅವರು, ಪ್ರತಿಯೊಬ್ಬ ತಂದೆ-ತಾಯಿಗೂ ನನ್ನ ಮಗ ಓರ್ವ ಐಎಎಸ್, ಐಪಿಎಸ್, ಕೆ.ಎ.ಎಸ್.ಅಧಿಕಾರಿಯಾಗಬೇಕು, ವಿಜ್ಞಾನಿಯಾಗಬೇಕೆಂಬ ಕನಸು ಕಾಣುವುದು ಸಹಜ. ಅವರ ಕನಸು ನನಸು ಮಾಡುವ ನಿಟ್ಟನಲ್ಲಿ ನೀವೆಲ್ಲರೂ ಕಾರ್ಯೋನ್ಮುಖರಾಗಬೇಕು ಎಂದರು.

ಇಂದು ದೇಶದ ಆಡಳಿತದ ಚುಕ್ಕಾಣಿ ಹಿಡಿದಿರುವ ಬಹುತೇಕ ಐಎಎಸ್ ಅಧಿಕಾರಿಗಳಲ್ಲಿ ರ್‍ಯಾಂಕ್ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ. ಆದರೆ ಅವರು ಜೀವನದಲ್ಲಿ ತೆಗೆದುಕೊಂಡ ನಿರ್ಧಾರಗಳು ಮತ್ತು ನಿರಂತರ ಅಭ್ಯಾಸ *(ಪುಟ 2ಕ್ಕೆ)*

Scanned with ACE Scanner

ತುಮಕೂರು ವಾರ್ತೆ.


06.02.2018

ಮಂಗಳವಾರ

# ವಿದ್ಯಾರ್ಥಿಗಳಿಗೆ ಜೀವನದಲ್ಲಿ ಗುರಿ ಇರಬೇಕು

ತುಮಕೂರು: ಜೀವನದಲ್ಲಿ ಪಾರದರ್ಶಕತೆ, ಪ್ರಾಮಾಣಿಕತೆ, ಕ್ರೀಯಾಶೀಲತೆ ಇದ್ದರೆ ನಮಗೆ ಎಲ್ಲವು ದೊರೆಯುತ್ತದೆ ಎಂದು ಜಿ.ಬಿ.ಶಿವರಾಜು ಹೇಳಿದರು.

ನಗರದ ಸಿದ್ದಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಸ್ವಯಂಸೇವಕರಿಗೆ ಆಯೋಜಿಸಲಾಗಿದ್ದ  ಒರಿಯನ್‌ಟೇಶನ್ ಕಾರ್ಯಕ್ರಮದಲ್ಲಿ ಮಾತನಾಡಿದರು. ಒಳ್ಳೆಯ ನೋಟ, ಒಳ್ಳೆಯ ಉಡುಗೆ ತೊಡುಗೆ ಬಯಸುವ ನಾವೂ ಒಳ್ಳೆಯವರಾಗಿಯೇ ಇರಬೇಕು, ಇದನ್ನು ರಾಷ್ಟ್ರೀಯ ಸೇವಾ ಯೋಜನೆ ಮೂಲಕ ವಿದ್ಯಾರ್ಥಿಗಳಿಗೆ ಕಲಿಸಿಕೊಡಬೇಕು, ಇಂದು ಶಿಕ್ಷಣ ಹಣ ಮಾಡುವ ವೃತ್ತಿಯಾಗಿ ಬೆಳೆದಿದೆ. ವಿದ್ಯಾರ್ಥಿಗಳಿಗೆ ಜೀವನದಲ್ಲಿ ಶಿಸ್ತು ಹಾಗೂ ಗುರಿ ಕಲಿಸಲು ಎನ್‌ಎಸ್‌ಎಸ್. ಅನುಷ್ಠಾನಕ್ಕೆ ಬಂದಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲೆ ಡಾ.ಆರ್. ಆನಂದಕುಮಾರಿ ವಹಿಸಿದ್ದರು.ಕು.ಶ್ರೀಲತಾ ಪ್ರಾರ್ಥಿಸಿದರು,ಪ್ರೊ. ವೈ.ಎಂ ಪದ್ಮ ಸ್ವಾಗತಿಸಿದರು. ಪ್ರೊ.ಸತೀಶ್ ವರದೇವ್ ವಂದನಾರ್ಪಣೆ ಮಾಡಿದರು. ವಿದ್ಯಾರ್ಥಿ ಕೆ.ಮೋಹನ್‌ಕುಮಾರ್ ಕಾರ್ಯಕ್ರಮ ನಿರೂಪಿಸಿದರು.




Scanned with ACE Scanner


ದಿ: 21.5.2018. ಸೋಮವಾರ. ಪ್ರಜಾಪ್ರಗತಿ.

Praja Pragathi (Kannada Daily)




ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಪ್ರತಿವರ್ಷದಂತೆ, ವಿದ್ಯಾರ್ಥಿಗಳ ಸೃಜನಶೀಲತೆ ಹೊರಹೊಮ್ಮಲು ರಸಗಂಗಾ-2018 ಕಾಲೇಜು ವಾರ್ಷಿಕ ಸಂಚಿಕೆಯನ್ನು ಹೊರತರುತ್ತಿದ್ದೇವೆ. ಪರಮಪೂಜ್ಯ ಡಾ. ಶ್ರೀ ಶಿವಕುಮಾರಸ್ವಾಮಿಜಿಯವರ ಆಶೀರ್ವಾದದೊಂದಿಗೆ ದಿನಾಂಕ: ಮೇ 19 ರಂದು ರಸಗಂಗಾ-2018ರ ಸಂಚಿಕೆಯನ್ನು ಬಿಡುಗಡೆಗೊಳಿಸಲಾಯಿತು. ಪ್ರಾಂಶುಪಾಲರಾದ ಡಾ|| ಆರ್. ಆನಂದಕುಮಾರಿ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

ದಿ: 21/05/18 / ಸೋಮವಾರ ತುಮಕೂರುವಾರ್ತೆ




ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಪ್ರತಿವರ್ಷದಂತೆ, ವಿದ್ಯಾರ್ಥಿಗಳ ಸೃಜನಶೀಲತೆ ಹೊರಹೊಮ್ಮಲು ಪರಮಪೂಜ್ಯ ಡಾ. ಶ್ರೀ ಶಿವಕುಮಾರಸ್ವಾಮೀಜಿ ಆಶೀರ್ವಾದದೊಂದಿಗೆ ''ರಸಗಂಗಾ-2018''''ರ ಸಂಚಿಕೆ ಬಿಡುಗಡೆಗೊಳಿಸಲಾಯಿತು. ಪ್ರಾಂಶುಪಾಲ ಡಾ. ಆರ್. ಆನಂದಕುಮಾರಿ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

Raj
21/5/2018

Scanned with ACE Scanner

ದಿ: 11-07-2019, ಗುರುವಾರ / ಪ್ರಜಾಪ್ರಗತಿ.

Induction Programme 2019



ತುಮಕೂರಿನ ಶ್ರೀ ಸಿದ್ದಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಇಂಡಕ್ಷನ್ ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಡಾ. ಆರ್. ಆನಂದಕುಮಾರಿ, ಪ್ರೊ. ಡಿ.ಆರ್. ಮೋಹನ್ ಕುಮಾರ್, ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಚಿತ್ರದಲ್ಲಿದ್ದಾರೆ.

"ಅಂತರರಾಷ್ಟ್ರೀಯ ಯೋಗ ದಿನ"

ಪ್ರಜಾ ಪ್ರಗತಿ ಜುಲೈ 11, 2019 ಗುರುವಾರ



ತುಮಕೂರಿನ ಶ್ರೀ ಸಿದ್ದಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಏರ್ಪಡಿಸಿದ್ದ ಯೋಗ ಕಾರ್ಯಕ್ರಮದಲ್ಲಿ ಯೋಗ ಪ್ರದರ್ಶನ ನೀಡಿದ ಕಾಲೇಜಿನ ವಿದ್ಯಾರ್ಥಿಗಳು.

Scanned with ACE Scanner

ದಿನಪತ್ರಿಕೆ : ವಿಜಯ ಕರ್ನಾಟಕ



### ಚಿತ್ರ ನಟ ದಿಗಂತ್ ವಿದ್ಯಾರ್ಥಿಗಳಿಗೆ ಸಲಹೆ

# ಪಠ್ಯೇತರ ಚಟುವಟಿಕೆ ಬಗ್ಗೆಯೂ ಆಸಕ್ತಿ ಇರಲಿ



ತುಮಕೂರಿನಲ್ಲಿ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ಯಾಂಡಲ್ ವುಡ್ ನಟ ದಿಗಂತ್ ಪಾಲ್ಗೊಂಡಿದ್ದರು.

**ವಿಕ ಸುದ್ದಿಲೋಕ** ತುಮಕೂರು

ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳ ಬಗ್ಗೆಯೂ ವಿದ್ಯಾರ್ಥಿಗಳು ಆಸಕ್ತಿ ತೋರಬೇಕು ಎಂದು ಸ್ಯಾಂಡಲ್‌ವುಡ್ ನಟ ದಿಗಂತ್ ತಿಳಿಸಿದರು.

ನಗರದ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪ್ರಸಕ್ತ ಸಾಲಿನ ಸಾಂಸ್ಕೃತಿಕ, ಕ್ರೀಡಾ, ಎನ್ನೆಸ್ಸೆಸ್, ಎನ್‌ಸಿಸಿ ಮತ್ತು ರೆಡ್‌ಕ್ರಾಸ್ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ಸಂಪೂರ್ಣ ವ್ಯಕ್ತಿತ್ವ ನಿರ್ಮಾಣಕ್ಕೆ ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳು ಅಗತ್ಯ. ಪಠ್ಯ ಪುಸ್ತಕ ಗಳಿಂದ ನಮ್ಮಲ್ಲಿ ಜ್ಞಾನಾರ್ಜನೆಯಾಗುತ್ತದೆ. ಅಂತೆಯೇ ಕಲೆ, ಸಾಹಿತ್ಯ, ಸಂಸ್ಕೃತಿಯು ಮನುಷ್ಯನನ್ನು ಪರಿಪೂರ್ಣನನ್ನಾಗಿಸುತ್ತದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಚಿತ್ರ ನಿರ್ಮಾಪಕ ಪುಷ್ಕರ್ ಮಲ್ಲಿಕಾರ್ಜುನಯ್ಯ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳ ಜವಾಬ್ದಾರಿ ಮತ್ತು ಕರ್ತವ್ಯಗಳು ಹೆಚ್ಚಾಗಿದೆ. ಜೀವನದಲ್ಲಿ ಯಾವುದೇ ನಿರ್ದಿಷ್ಟ ಗುರಿ ತಲುಪಲು ವಿದ್ಯಾರ್ಥಿಗಳಿಗೆ, ತಂದೆ, ತಾಯಿ, ಗುರುಗಳ ಮಾರ್ಗದರ್ಶನದ ಅವಶ್ಯ. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳೆರಡಕ್ಕೂ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಪ್ರಾಚಾರ್ಯೆ ಡಾ. ಆನಂದಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಸನ್ನಾ ಹೆಗಡೆ, ಚಿತ್ರ ನಟಿ ಪೂಜಾ ದೇವಾರಿಯ, ಕಾರ್ಯಕ್ರಮ ಸಂಚಾಲಕ ಡಾ. ಶೈಲೇಶ್ ಬಿ.ಎಸ್. ಮತ್ತಿತರರಿದ್ದರು.

Scanned with ACE Scanner

ದಿನಾಂಕ: 12.07.18
ದಿನ: ಗುರುವಾರ
ತುಮಕೂರು ವಾರ್ತೆ

# ಉದ್ಯೋಗ ಮೇಳ

ತುಮಕೂರು: ವಿಶ್ವ ಕೌಶಲ್ಯ ದಿನಾಚರಣೆ ಅಂಗವಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾ ಕೌಶಲ್ಯ ಅಭಿವೃದ್ಧಿ ಕಚೇರಿ, ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜು ಹಾಗೂ ಬೆಂಗಳೂರಿನ ಪ್ರತಿಷ್ಠಿತ ಖಾಸಗಿ ಕಂಪನಿಗಳ ಸಹಯೋಗದಲ್ಲಿ ಜುಲೈ 17ರಂದು ಉದ್ಯೋಗ ಮೇಳ ನಡೆಯಲಿದೆ.

ಮೇಳದಲ್ಲಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣ, ಅನುತ್ತೀರ್ಣ, ದ್ವಿತೀಯ ಪಿಯುಸಿ, ಯಾವುದೇ ಪದವಿ, ಸ್ನಾತಕೋತ್ತರ ಪದವಿ, ಐಟಿಐ ಹಾಗೂ ಎಲ್ಲಾ ಟ್ರೇಡ್‌ನ ಡಿಪ್ಲೊಮಾ ಪಾಸಾದ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ.

ಮೇಳವು ಜುಲೈ 17ರಂದು ಬೆಳಿಗ್ಗೆ 9.30 ಗಂಟೆಗೆ ನಗರದ ಟೌನ್ ಹಾಲ್ ವೃತ್ತದ ಬಳಿ ಇರುವ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜಿನಲ್ಲಿ ನಡೆಯಲಿದ್ದು, 18 ರಿಂದ 40 ವರ್ಷದೊಳಗಿರುವ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ತಮ್ಮ ಬಯೋಡೇಟಾ ಹಾಗೂ ಮೂಲ ಶಾಲಾ ದಾಖಲಾತಿಗಳೊಂದಿಗೆ ಮೇಳದಲ್ಲಿ ಹಾಜರಾಗಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ. 0816- 2278488, 9916998464, 94480 24687 ಸಂಪರ್ಕಿಸಬಹುದೆಂದು ಉದ್ಯೋಗಾಧಿಕಾರಿ ಎಂ.ಗಲಗಲಿ ತಿಳಿಸಿದ್ದಾರೆ.

ದಿನಾಂಕ: 12.07.18
ದಿನ: ಗುರುವಾರ
ವಿಜಯ ಕರ್ನಾಟಕ

# 17ಕ್ಕೆ ಉದ್ಯೋಗ ಮೇಳ

ತುಮಕೂರು: ವಿಶ್ವ ಕೌಶಲ ದಿನಾಚರಣೆಯ ಅಂಗವಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾ ಕೌಶಲ ಅಭಿವೃದ್ಧಿ ಕಚೇರಿ, ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜು ಹಾಗೂ ಬೆಂಗಳೂರಿನ ಪ್ರತಿಷ್ಠಿತ ಖಾಸಗಿ ಕಂಪನಿಗಳ ಸಹಯೋಗದಲ್ಲಿ ಜು.17ರಂದು ಉದ್ಯೋಗ ಮೇಳ ನಡೆಯಲಿದೆ. ಮೇಳದಲ್ಲಿ ಎಸ್ಸೆಸ್ಸೆಲ್ಸಿ ಉತ್ತೀರ್ಣ, ಅನುತ್ತೀರ್ಣ, ದ್ವಿತೀಯ ಪಿಯು, ಯಾವುದೇ ಪದವಿ, ಸ್ನಾತಕೋತ್ತರ ಪದವಿ, ಐಟಿಐ ಹಾಗೂ ಎಲ್ಲ ಟ್ರೇಡ್‌ನ ಡಿಪ್ಲೋಮಾ ಪಾಸಾದ ಅಭ್ಯರ್ಥಿಗಳು ಭಾಗವಹಿಸಬಹುದು. ಮೇಳವು ಜು.17ರಂದು ಬೆಳಗ್ಗೆ 9.30ಕ್ಕೆ ನಗರದ ಟೌನ್‌ಹಾಲ್ ವೃತ್ತದ ಬಳಿ ಇರುವ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜಿನಲ್ಲಿ ನಡೆಯಲಿದ್ದು, 18ರಿಂದ 40 ವರ್ಷದೊಳಗಿರುವ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ತಮ್ಮ ಬಯೋಡೇಟಾ ಹಾಗೂ ಮೂಲ ಶಾಲಾ ದಾಖಲೆಗಳೊಂದಿಗೆ ಮೇಳದಲ್ಲಿ ಹಾಜರಾಗಬಹುದು. ಮಾಹಿತಿಗಾಗಿ ದೂರವಾಣಿ ಸಂಖ್ಯೆ 0816-2278488, 99169 98464, 94480 24687 ಸಂಪರ್ಕಿಸಬಹುದೆಂದು ಉದ್ಯೋಗಾಧಿಕಾರಿ ವಿ.ಎಂ.ಗಲಗಲಿ ತಿಳಿಸಿದ್ದಾರೆ.

# 17ರಂದು ಉದ್ಯೋಗ ಮೇಳ

**ತುಮಕೂರು:** ವಿಶ್ವ ಕೌಶಲ್ಯ ದಿನಾಚರಣೆ ಅಂಗವಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾ ಕೌಶಲ್ಯ ಅಭಿವೃದ್ಧಿ ಕಚೇರಿ, ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜು ಹಾಗೂ ಬೆಂಗಳೂರಿನ ಪ್ರತಿಷ್ಠಿತ ಖಾಸಗಿ ಕಂಪನಿಗಳ ಸಹಯೋಗದಲ್ಲಿ ಜು. 17ರಂದು ಉದ್ಯೋಗ ಮೇಳ ನಡೆಯಲಿದೆ. ಮೇಳದಲ್ಲಿ ಎಸ್ಸೆಸ್ಸೆಲ್ಸಿ ಉತ್ತೀರ್ಣ/ಅನುತ್ತೀರ್ಣ, ದ್ವಿತೀಯ ಪಿಯುಸಿ, ಯಾವುದೇ ಪದವಿ, ಸ್ನಾತಕೋತ್ತರ ಪದವಿ, ಐಟಿಐ ಹಾಗೂ ಎಲ್ಲ ಟ್ರೇಡ್‌ನ ಡಿಪ್ಲೊಮಾ ಉತ್ತೀರ್ಣರಾದ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ. ಬೆಳಗ್ಗೆ 9.30ಕ್ಕೆ ನಗರದ ಟೌನ್ ಹಾಲ್ ವೃತ್ತದ ಬಳಿ ಇರುವ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜಿನಲ್ಲಿ, ನಡೆಯಲಿದ್ದು, 18 ರಿಂದ 40 ವರ್ಷದೊಳಗಿರುವ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ತಮ್ಮ ದಾಖಲಾತಿಗಳೊಂದಿಗೆ ಮೇಳದಲ್ಲಿ ಹಾಜರಾಗಬಹುದಾಗಿದೆ. ಮಾಹಿತಿಗಾಗಿ ದೂ.ಸಂ. 0816-2278488, 9916998464, 9448024687 ಸಂಪರ್ಕಿಸಬಹುದು.

ದಿನಾಂಕ: 12.07.18
ದಿನ: ಗುರುವಾರ
ಕನ್ನಡಪ್ರಭ

## ಕಿರು ಸುದ್ದಿ

# ಜು.17ರಂದು ಉದ್ಯೋಗ ಮೇಳ

ತುಮಕೂರು : ವಿಶ್ವ ಕೌಶಲ್ಯ ದಿನಾಚರಣೆ ಅಂಗವಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾ ಕೌಶಲ್ಯ ಅಭಿವೃದ್ಧಿ ಕಚೇರಿ, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜು ಹಾಗೂ ಬೆಂಗಳೂರಿನ ಪ್ರತಿಷ್ಠಿತ ಖಾಸಗಿ ಕಂಪನಿಗಳ ಸಹಯೋಗದಲ್ಲಿ ಜು. 17ರಂದು ಉದ್ಯೋಗ ಮೇಳ ನಡೆಯಲಿದೆ.

ಮೇಳದಲ್ಲಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣ,ಅನುತ್ತೀರ್ಣ, ದ್ವಿತೀಯ ಪಿಯುಸಿ, ಯಾವುದೇ ಪದವಿ, ಸ್ನಾತಕೋತ್ತರ ಪದವಿ, ಐಟಿಐ ಹಾಗೂ ಎಲ್ಲಾ ಟ್ರೇಡ್‌ನ ಡಿಪ್ಲೊಮಾ ಪಾಸಾದ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ. ಮೇಳ ಜು.17ರಂದು ಬೆಳಿಗ್ಗೆ 9.30 ಕ್ಕೆ ನಗರದ ಟೌನ್ ಹಾಲ್ ವೃತ್ತದ ಬಳಿ ಇರುವ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜಿನಲ್ಲಿ ನಡೆಯಲಿದೆ. 18 ರಿಂದ 40 ವರ್ಷದೊಳಗಿರುವ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ತಮ್ಮ ಬಯೋಡೇಟಾ ಹಾಗೂ ಮೂಲ ಶಾಲಾ ದಾಖಲಾತಿಗಳೊಂದಿಗೆ ಮೇಳದಲ್ಲಿ [illegible]

ದಿನಾಂಕ 12.07.18
ಗುರುವಾರ
ಪ್ರಜಾಪ್ರಗತಿ

Scanned with ACE Scanner

# ಜುಲೈ 17ರಂದು ಸಿದ್ದಗಂಗಾ ಕಾಲೇಜಿನಲ್ಲಿ ಉದ್ಯೋಗ ಮೇಳ

ತುಮಕೂರು: "ವಿಶ್ವ ಕೌಶಲ್ಯ ದಿನಾಚರಣೆ"ಯ ಅಂಗವಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾ ಕೌಶಲ್ಯ ಅಭಿವೃದ್ಧಿ ಕಛೇರಿ, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜು ಹಾಗೂ ಬೆಂಗಳೂರಿನ ಪ್ರತಿಷ್ಠಿತ ಖಾಸಗಿ ಕಂಪನಿಗಳ ಸಹ ಯೋಗ ದಲ್ಲಿ ಜುಲೈ 17ರಂದು ಉದ್ಯೋಗ ಮೇಳ ನಡೆಯಲಿದೆ.

ಮೇಳದಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣ/ಅನುತ್ತೀರ್ಣ, ದ್ವಿತೀಯ ಪಿ.ಯು.ಸಿ., ಯಾವುದೇ ಪದವಿ, ಸ್ನಾತಕೋತ್ತರ ಪದವಿ, ಐಟಿಐ ಹಾಗೂ ಎಲ್ಲಾ ಟ್ರೇಡ್‌ನ ಡಿಪ್ಲೊಮಾ ಪಾಸಾದ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ.

ಮೇಳವು ಜುಲೈ 17ರಂದು ಬೆಳಿಗ್ಗೆ 9.30 ಗಂಟೆಗೆ ನಗರದ ಟೌನ್ ಹಾಲ್ ವೃತ್ತದ ಬಳಿ ಇರುವ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜಿನಲ್ಲಿ ನಡೆಯಲಿದೆ.

ದಿನಾಂಕ: 12.07.18
ದಿನ: ಗುರುವಾರ
ದಿನಪತ್ರಿಕೆ: ವಿಶಾಲಕ್ರಾಂತಿ

# ಜುಲೈ 17ರಂದು ಉದ್ಯೋಗ ಮೇಳ

ತುಮಕೂರು:"ವಿಶ್ವ ಕೌಶಲ್ಯ ದಿನಾಚರಣೆ"ಯ ಅಂಗವಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾ ಕೌಶಲ್ಯ ಅಭಿವೃದ್ಧಿ ಕಛೇರಿ, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜು ಹಾಗೂ ಬೆಂಗಳೂರಿನ ಪ್ರತಿಷ್ಠಿತ ಖಾಸಗಿ ಕಂಪನಿಗಳ ಸಹಯೋಗದಲ್ಲಿ ಜುಲೈ 17ರಂದು ಉದ್ಯೋಗ ಮೇಳ ನಡೆಯಲಿದೆ.

ಮೇಳದಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣ/ಅನುತ್ತೀರ್ಣ, ದ್ವಿತೀಯ ಪಿ.ಯು.ಸಿ., ಯಾವುದೇ ಪದವಿ, ಸ್ನಾತಕೋತ್ತರ ಪದವಿ, ಐಟಿಐ ಹಾಗೂ ಎಲ್ಲಾ ಟ್ರೇಡ್‌ನ ಡಿಪ್ಲೊಮಾ ಪಾಸಾದ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ.

ಮೇಳವು ಜುಲೈ 17ರಂದು ಬೆಳಿಗ್ಗೆ 9.30 ಗಂಟೆಗೆ ನಗರದ ಟೌನ್ ಹಾಲ್ ವೃತ್ತದ ಬಳಿ ಇರುವ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜಿನಲ್ಲಿ ನಡೆಯಲಿದ್ದು, 18 ರಿಂದ 40 ವರ್ಷದೊಳಗಿರುವ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ತಮ್ಮ ಬಯೋಡೇಟಾ ಹಾಗೂ ಮೂಲ ಶಾಲಾ ದಾಖಲಾತಿಗಳೊಂದಿಗೆ ಮೇಳದಲ್ಲಿ ಹಾಜರಾಗಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0816-2278488, 9916998464, 9448024687 ಸಂಪರ್ಕಿಸಬಹುದೆಂದು ಉದ್ಯೋಗಾಧಿಕಾರಿ ವಿ.ಎಂ.ಗಲಗಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿನಾಂಕ: 12.07.18
ದಿನ: ಗುರುವಾರ
ದಿನಪತ್ರಿಕೆ: ಪ್ರಜಾಪ್ರಗತಿ

# ಜುಲೈ 17ರಂದು ಉದ್ಯೋಗ ಮೇಳ

ತುಮಕೂರು: "ವಿಶ್ವ ಕೌಶಲ್ಯ ದಿನಾಚರಣೆ"ಯ ಅಂಗವಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾ ಕೌಶಲ್ಯ ಅಭಿವೃದ್ಧಿ ಕಛೇರಿ, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜು ಹಾಗೂ ಬೆಂಗಳೂರಿನ ಪ್ರತಿಷ್ಠಿತ ಖಾಸಗಿ ಕಂಪನಿಗಳ ಸಹಯೋಗದಲ್ಲಿ ಜುಲೈ 17ರಂದು ಉದ್ಯೋಗ ಮೇಳ ನಡೆಯಲಿದೆ.

ಮೇಳದಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣ/ಅನುತ್ತೀರ್ಣ, ದ್ವಿತೀಯ ಪಿ.ಯು.ಸಿ., ಯಾವುದೇ ಪದವಿ, ಸ್ನಾತಕೋತ್ತರ ಪದವಿ, ಐಟಿಐ ಹಾಗೂ ಎಲ್ಲಾ ಟ್ರೇಡ್‌ನ ಡಿಪ್ಲೊಮಾ ಪಾಸಾದ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ.

ಮೇಳವು ಜುಲೈ 17ರಂದು ಬೆಳಿಗ್ಗೆ 9.30 ಗಂಟೆಗೆ ನಗರದ ಟೌನ್ ಹಾಲ್ ವೃತ್ತದ ಬಳಿ ಇರುವ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜಿನಲ್ಲಿ ನಡೆಯಲಿದ್ದು, 18 ರಿಂದ 40 ವರ್ಷದೊಳಗಿರುವ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ತಮ್ಮ ಬಯೋಡೇಟಾ ಹಾಗೂ ಮೂಲ ಶಾಲಾ ದಾಖಲಾತಿಗಳೊಂದಿಗೆ ಮೇಳದಲ್ಲಿ ಹಾಜರಾಗಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0816-2278488, 9916998464, 9448024687 ಸಂಪರ್ಕಿಸಬಹುದೆಂದು ಉದ್ಯೋಗಾಧಿಕಾರಿ ವಿ.ಎಂ.ಗಲಗಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿನಾಂಕ: 12.07.18
ದಿನ: ಗುರುವಾರ
ದಿನಪತ್ರಿಕೆ: ನ್ಯೂಸ್ ತ

Scanned with ACE Scanner

# 17ರಂದು ಉದ್ಯೋಗ ಮೇಳ

ತುಮಕೂರು: ವಿಶ್ವ ಕೌಶಲ ದಿನಾಚರಣೆ ಅಂಗವಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾ ಕೌಶಲ್ಯ ಅಭಿವೃದ್ಧಿ ಕಚೇರಿ ಮತ್ತು ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜಿನ ಸಹಯೋಗದಲ್ಲಿ ಜುಲೈ 17 ರಂದು ಬೆಳಿಗ್ಗೆ 9.30ಕ್ಕೆ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜಿನಲ್ಲಿ ಉದ್ಯೋಗ ಮೇಳವನ್ನು ಏರ್ಪಡಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0816-2278488 ಅಥವಾ ಮೊಬೈಲ್ ಸಂಖ್ಯೆ 9916998464, 9448024687ನ್ನು ಸಂಪರ್ಕಿಸಬಹುದು ಎಂದು ಉದ್ಯೋಗಾಧಿಕಾರಿ ವಿ.ಎಂ.ಗಲಗಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿನಾಂಕ: 12.07.2018
ದಿನ: ಗುರುವಾರ
ಪತ್ರಿಕೆ: ಪ್ರಜಾವಾಣಿ

ದಿನಾಂಕ 12.07.18
ದಿನ ಗುರುವಾರ
ಪತ್ರಿಕೆ ಬೆವರಹನಿ

ರ

# ಉದ್ಯೋಗ ಮೇಳ

ತುಮಕೂರು: "ವಿಶ್ವ ಕೌಶಲ್ಯ ದಿನಾಚರಣೆ"ಯ ಅಂಗವಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾ ಕೌಶಲ್ಯ ಅಭಿವೃದ್ಧಿ ಕಛೇರಿ. ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜು ಹಾಗೂ ಬೆಂಗಳೂರಿನ ಪ್ರತಿಷ್ಠಿತ ಖಾಸಗಿ ಕಂಪನಿಗಳ ಸಹಯೋಗದಲ್ಲಿ ಜುಲೈ 17ರಂದು ಉದ್ಯೋಗ ಮೇಳ ನಡೆಯಲಿದೆ.

ಎಸ್.ಎಸ್.ಎಲ್.ಸಿ. ಉತ್ತೀರ್ಣ/ಅನುತ್ತೀರ್ಣ, ದ್ವಿತೀಯ ಪಿ.ಯು.ಸಿ., ಯಾವುದೇ ಪದವಿ, ಸ್ನಾತಕೋತ್ತರ ಪದವಿ, ಐಟಿಐ ಹಾಗೂ ಎಲ್ಲಾ ಟ್ರೇಡ್‌ನ ಡಿಪ್ಲೊಮಾ ಪಾಸಾದ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0816-2278488, 9916998464, 9448024687 ಸಂಪರ್ಕಿಸಿ.

# ಜುಲೈ 17ರಂದು ಉದ್ಯೋಗ ಮೇಳ

ತುಮಕೂರು: "ವಿಶ್ವ ಕೌಶಲ್ಯ ದಿನಾಚರಣೆ"ಯ ಅಂಗವಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾ ಕೌಶಲ್ಯ ಅಭಿವೃದ್ಧಿ ಕಛೇರಿ, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜು ಹಾಗೂ ಬೆಂಗಳೂರಿನ ಪ್ರತಿಷ್ಠಿತ ಖಾಸಗಿ ಕಂಪನಿಗಳ ಸಹಯೋಗದಲ್ಲಿ ಜುಲೈ 17ರಂದು ಉದ್ಯೋಗ ಮೇಳ ನಡೆಯಲಿದೆ.

ಮೇಳದಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣ/ಅನುತ್ತೀರ್ಣ, ದ್ವಿತೀಯ ಪಿ.ಯು.ಸಿ., ಯಾವುದೇ ಪದವಿ, ಸ್ನಾತಕೋತ್ತರ ಪದವಿ, ಐಟಿಐ ಹಾಗೂ ಎಲ್ಲಾ ಟ್ರೇಡ್‌ನ ಡಿಪ್ಲೊಮಾ ಪಾಸಾದ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ.

ಮೇಳವು ಜುಲೈ 17ರಂದು ಬೆಳಿಗ್ಗೆ 9.30 ಗಂಟೆಗೆ ನಗರದ ಟೌನ್ ಹಾಲ್ ವೃತ್ತದ ಬಳಿ ಇರುವ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜಿನಲ್ಲಿ ನಡೆಯಲಿದ್ದು, 18 ರಿಂದ 40 ವರ್ಷದೊಳಗಿರುವ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ತಮ್ಮ ಬಯೋಡೇಟಾ ಹಾಗೂ ಮೂಲ ಶಾಲಾ ದಾಖಲಾತಿಗಳೊಂದಿಗೆ ಮೇಳದಲ್ಲಿ ಹಾಜರಾಗಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0816-2278488, 9916998464, 9448024687 ಸಂಪರ್ಕಿಸಬಹುದೆಂದು ಉದ್ಯೋಗಾಧಿಕಾರಿ ವಿ.ಎಂ.ಗಲಗಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿನಾಂಕ: 12.07.18
ದಿನ: ಗುರುವಾರ
ಪತ್ರಿಕೆ: ಬೆಂಕಿಯ ಬಲೆ

Scanned with ACE Scanner

ಸಂಯುಕ್ತ ಕರ್ನಾಟಕ. Date - 29/07/2019
ಸೋಮವಾರ

# ವಿದ್ಯಾವಂತರೇ ಹೆಚ್ಚು ಏಡ್ಸ್ ರೋಗಿಗಳು

- ಗೊತ್ತಿದ್ದರೂ ಏಡ್ಸ್ ರೋಗಕ್ಕೆ ತುತ್ತಾಗುತ್ತಿರುವುದು ವಿಷಾದನೀಯ
- ಏಡ್ಸ್ ರೋಗ ಬರುವುದು ಈಗ ಸಾಮಾನ್ಯವಾಗಿದೆ

ಸಂ.ಕ ಸಮಾಚಾರ ತುಮಕೂರು

ಬಹುತೇಕ ವಿದ್ಯಾವಂತರೆ ಏಡ್ಸ್ ರೋಗಿಗಳಾಗಿ ಆಸ್ಪತ್ರೆಗೆ ದಾಖಲಾಗುತ್ತಿರುವುದು ಶೋಚನೀಯ ಎಂದು ಜಿಲ್ಲಾ ಸಾರ್ವಜನಿಕ ಆಸ್ಪತ್ರೆ ಐಆರ್‌ಟಿ ಕೇಂದ್ರದ ಸಂಯೋಜನಾಧಿಕಾರಿ ಶಂಕರ್ ವಿಷಾದಿಸಿದರು.

ನಗರದ ಸಿದ್ಧಗಂಗಾ ಕಲಾ, ವಾಣಿಜ್ಯ, ವಿಜ್ಞಾನ ಕಾಲೇಜಿನಲ್ಲಿ ಯುವರೆಡ್ ಕ್ರಾಸ್ ವಿಭಾಗದಿಂದ ಏರ್ಪಡಿಸಿದ್ದ ರೆಡ್‌ರಿಬ್ಬನ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ವಿವಿಧ ಪದವಿ ಪಡೆದವರು ಗೊತ್ತಿದ್ದರೂ ಏಡ್ಸ್ ರೋಗಕ್ಕೆ ತುತ್ತಾಗುತ್ತಿದ್ದಾರೆ. ಹೆಚ್‌ಐವಿ, ಏಡ್ಸ್ ರೋಗ ಬರುವುದು ಈಗ ಸಾಮಾನ್ಯವಾಗಿದೆ. ಸೂಕ್ತ ಚಿಕಿತ್ಸಾ ವಿಧಾನಗಳು ನಮ್ಮ ಆಸ್ಪತ್ರೆಯಲ್ಲಿ ದೊರೆಯುತ್ತಿವೆ. ಪ್ರತಿಯೊಬ್ಬ ಮನುಷ್ಯನಿಗೂ ದೈಹಿಕ ಮತ್ತು ಮಾನಸಿಕ ಆರೋಗ್ಯ ಬೇಕಾಗುತ್ತದೆ. ತಂತ್ರಜ್ಞಾನ ಯುಗದಲ್ಲಿ ಒತ್ತಡ ಮತ್ತು ಜೀವನ ಶೈಲಿ, ಆಹಾರ ಕ್ರಮದ ಬದಲಾವಣೆಯಿಂದ ಮಧುಮೇಹ, ರಕ್ತದೊತ್ತಡ, ಕ್ಷಯ, ಕ್ಯಾನ್ಸರ್ ಇತ್ಯಾದಿ ರೋಗಗಳು ಬರುತ್ತಿವೆ. ಆದ್ದರಿಂದ ನಮ್ಮ ಜೀವನ ಪದ್ಧತಿಯನ್ನು ಭಾರತೀಯ ಸಂಸ್ಕೃತಿಯ ಪರಂಪರೆಗೆ ಅನುಗುಣವಾಗಿ ಇರುವಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರಾದ ಆನಂದಕುಮಾರಿ ಮಾತನಾಡಿ, ಸಮೂಹ ಮಾಧ್ಯಮಗಳು, ಟಿ.ವಿ., ಸಾಮಾಜಿಕ ಜಾಲತಾಣಗಳು ಮನುಷ್ಯರಿಗೆ ಅನುಕೂಲವಲ್ಲದ ವಿಷಯಗಳನ್ನು ಪ್ರಸಾರ ಮಾಡುತ್ತಿವೆ. ಆದ್ದರಿಂದ ಅವುಗಳನ್ನು ದೂರವಿಟ್ಟು ಪುಸ್ತಕಗಳ ಅಧ್ಯಯನದಿಂದ ಮಾನವೀಯ ನೆಲೆಗಟ್ಟಿನಲ್ಲಿ ಬದುಕಬೇಕೆಂದು ಸಲಹೆ ನೀಡಿದರು.

ಸೌಂದರ್ಯ ಪ್ರಾರ್ಥಿಸಿದರಯ, ಪ್ರಾಧ್ಯಾಪಕ ಕುಮಾರಸ್ವಾಮಿ ಸ್ವಾಗತಿಸಿದರು, ಶ್ರುತಿ ವಂದಿಸಿದರು. ವಿದ್ಯಾರ್ಥಿಗಳಾದ ಹುಸ್ನಾಕೌಸರ್, ಯಶಸ್ವಿನಿ, ಜಿ. ಸಿಂಧಿಯಾ ನಿರೂಪಿಸಿದರು.

ಸಂಯುಕ್ತ ಕರ್ನಾಟಕ, Date - 4/8/2019 ಭಾನುವಾರ

# ವೃದ್ಧ ತಂದೆ ತಾಯಿ ಪೋಷಣೆ ಮಕ್ಕಳ ಜವಾಬ್ದಾರಿ

ಸಂ.ಕ ಸಮಾಚಾರ ತುಮಕೂರು

ಸಮಯ ಪ್ರಜ್ಞೆ, ಪರಿಶ್ರಮ, ಕಾರ್ಯಬದ್ಧತೆಯಿಂದ ಜಾಗತಿಕ ಸವಾಲುಗಳನ್ನು ಎದುರಿಸುವ ಮೂಲಕ ವಿದ್ಯಾರ್ಥಿಗಳು ಮಹತ್ವದ ಸ್ಥಾನಗಳೊಂದಿಗೆ ಸಮಾಜಮುಖಿ ಕಾರ್ಯ ರೂಪಿಸಬೇಕೆಂದು ಪ್ರಸಿದ್ಧ ವೈದ್ಯರಾದ ಡಾ.ಎಸ್.ಅಹಲ್ಯ ಸಲಹೆ ನೀಡಿದರು.

ಇಲ್ಲಿನ ಸಿದ್ಧಗಂಗಾ ಬಾಲಕರ ಕಾಲೇಜಿನಲ್ಲಿ ಏರ್ಪಡಿಸಿದ್ದ ಅಭಿವ್ಯಕ್ತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ನಮ್ಮೊಳಗಿನ ಅಂತಃಸತ್ವವನ್ನು ಹೊರ ಹಾಕುವುದೇ ಅಭಿವ್ಯಕ್ತಿ. ಬೇಂದ್ರೆಯವರ ಶ್ರಾವಣ ಬಂತು ಕವಿತೆ ನಮ್ಮ ಜೀವನದಲ್ಲಿ ಜೀವನೋತ್ಸಹ ಮೂಡಿಸುತ್ತದೆ. ಕೇವಲ ಪಠ್ಯಕಷ್ಟೆ ಸೀಮಿತವಾಗಬಾರದು. ಕೇವಲ ಪದವಿ ಪುರಸ್ಕಾರಗಳಿಗಷ್ಟೆ ಜೀವನದ ಆತ್ಯಂತಿಕ ಸತ್ಯವಲ್ಲ. ಸಾಮರಸ್ಯದ ಜೀವನಕ್ಕೆ ಕಾರಣವಾಗಬೇಕು ಎಂದರು.



ತುಮಕೂರಿನ ಸಿದ್ಧಗಂಗಾ ಬಾಲಕರ ಕಾಲೇಜಿನಲ್ಲಿ ಏರ್ಪಡಿಸಿದ್ದ ಅಭಿವ್ಯಕ್ತಿ ಕಾರ್ಯಕ್ರಮವನ್ನು ಪ್ರಸಿದ್ಧ ವೈದ್ಯರಾದ ಡಾ. ಎಸ್.ಅಹಲ್ಯ ಉದ್ಘಾಟಿಸಿದರು. ಆನಂದಕುಮಾರಿ, ಪ್ರಸನ್ನಾಚಾರ್ ಮತ್ತಿತರರು ಇದ್ದರು.

ಉಪನ್ಯಾಸಕ ಎನ್.ಕೃಷ್ಣಮೂರ್ತಿ ಮಾತನಾಡಿ, ಜೀವನದ ಅವಿಭಾಜ್ಯ ಅಂಗವಾದ ತಂದೆ, ತಾಯಿ, ಗುರುವಿನ ಸ್ಥಾನಗಳನ್ನು ಅರ್ಥ ಮಾಡಿಕೊಂಡು ಗೌರವ ನೀಡಬೇಕು. ವೃದ್ಧಾಪ್ಯದಲ್ಲಿರುವ ತಂದೆ, ತಾಯಿಯನ್ನು ಪೋಷಿಸುವುದು ಪ್ರತಿಯೊಬ್ಬ ಮಗ ಅಥವಾ ಮಗಳ ಕರ್ತವ್ಯ. ಅದನ್ನು ಜವಾಬ್ದಾರಿ ಎಂದು ನಿರ್ವಹಿಸಬೇಕೆಂದರು.

ಕಾಲೇಜಿನ ಪ್ರಾಚಾರ್ಯರಾದ ಡಾ. ಆನಂದಕುಮಾರಿ ಅಧ್ಯಕ್ಷತೆ ವಹಿಸಿ, ಸಾಧನೆ ಮೂಲಕ ತಮ್ಮ ಅಂತಃಸತ್ವವನ್ನು ದರ್ಶಿಸಬೇಕು. ಮಿತ ಭಾಷಿಗಳಾಗಿ ಸಮಾಜಕ್ಕೆ ಕೊಡುಗೆ ನೀಡಬೇಕೆಂದು ಸಲಹೆ ನೀಡಿದರು.

ಅಭಿವ್ಯಕ್ತಿ ಕಾರ್ಯಕ್ರಮದ ಸಂಚಾಲಕ ಡಾ. ಎನ್.ಪ್ರಸನ್ನಕುಮಾರ್ ಸ್ವಾಗತಿಸಿದರು, ಪ್ರಾಧ್ಯಾಪಕರಾದ ಸರ್ವಮಂಗಳ, ರೇಖಾ ಹಿಮಾನಂದ್ ಅತಿಥಿಗಳನ್ನು ಪರಿಚಯಿಸಿದರು. ಮಧು ಎಸ್.ಕುಮಾರ್ ನಿರೂಪಿಸಿದರು, ಸಹ ಸಂಚಾಲಕರಾದ ವಿ.ಸಂಧ್ಯಾ ವಂದಿಸಿದರು.

Scanned with ACE Scanner

ದಿನಾಂಕ: 01.08.2018 | ಬುಧವಾರ

ಪತ್ರಿಕೆ: ಪ್ರಜಾಪ್ರಗತಿ

# ಗುಂಡುತೋಪುಗಳನ್ನು ರಕ್ಷಿಸುವ ಅಗತ್ಯವಿದೆ:ರೇಣುಕಪ್ಪ



ತುಮಕೂರು

ಹಿಂದಿನ ಕಾಲದಿಂದ ಬಂದಿರುವ ಗುಂಡು ತೋಪುಗಳು ಹಾಗೂ ಮರಗಳ ಸಂರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ ಎಂದು ಪ್ರೊ.ಜಿ.ಎಸ್. ರೇಣುಕಪ್ಪ ಸಲಹೆ ನೀಡಿದರು.

ಜನ ಶಿಕ್ಷಣ ಸಂಸ್ಥೆಯು ಶ್ರೀ ಸಿದ್ಧಗಂಗಾ ಮಹಿಳಾ ಪದವಿ ಪೂರ್ವ ಕಾಲೇಜು ಸಹ ಯೋಗದೊಂದಿಗೆ ಆಯೋಜಿಸಿದ್ದ ಸ್ವಚ್ಛತಾ ಅಭಿಯಾನ ಕಾರ್ಯ ಕ್ರಮದಡಿ ಆಯೋಜಿಸಿದ್ದ ಕಾರ್ಯ ಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ಗಿಡ ಮರಗಳನ್ನು ನೆಡುವುದರಿಂದ ಆಗುವ ಪ್ರಯೋಜನಗಳ ಬಗ್ಗೆ ವಿವರಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಜನಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಟಿ.ಆರ್.ಲೋಕೇಶ್ ಮಾತನಾಡಿ ಸ್ವಚ್ಛತಾ ಅಭಿಯಾನದ ಕಾರ್ಯಕ್ರಮ ಒಂದು ಉಪಯುಕ್ತ ಕಾರ್ಯಕ್ರಮವಾಗಿದ್ದು, ಇದರಲ್ಲಿ ಸಸಿ ನೆಡುವ ಕಾರ್ಯಕ್ರಮವೂ ಒಂದಾಗಿದೆ. ಇದರ ಮೂಲಕ ಪರಿಸರ ಸಂರಕ್ಷಣೆ ಮತ್ತು ಜನತೆಯಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವುದಾಗಿದೆ. ಎರೆಹುಳು ಗೊಬ್ಬರ ತಯಾರಿಕೆ ಹೀಗೆ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅರಿವು ಮೂಡಿಸುವ ಅಗತ್ಯವಿದೆ ಎಂದರು.

ಜನ ಶಿಕ್ಷಣ ಸಂಸ್ಥೆ ನಿರ್ದೇಶಕಿ ಆರ್.ಎಚ್.ಸುಕನ್ಯ ಮಾತನಾಡಿ ಇಲ್ಲಿಯವರೆಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಡಿ.ವಿ.ಇ.ಓ. ಕೆ.ಬಾಲಾಜಿ ಮಾತನಾಡಿ ಸಾಕ್ಷರತೆಯ ಉದ್ದೇಶ ಮತ್ತು ಅದು ಬೆಳೆದು ಬಂದ ಹಾದಿಯ ಬಗ್ಗೆ ವಿವರಿಸಿದರು. ಪ್ರೊ.ಬಿ.ಎಸ್. ಮಂಜುಳ ಮಾತನಾಡಿ ಮಹಿಳಾ ಸಬಲತೆ ಮತ್ತು ಮಹಿಳೆಯರ ಸ್ವಯಂ ಉದ್ಯೋಗ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಜಯಮ್ಮ ನಿರೂಪಣೆ ಮಾಡಿದರು. ಪಲ್ಲವಿ ಸ್ವಾಗತಿಸಿದರು. ತೇಜಸ್ವಿನಿ ವಂದಿಸಿದರು. ಪ್ರಮಾಣ ಪತ್ರ ಹಾಗೂ ಬಹುಮಾನ ವಿತರಣೆ ನಡೆಯಿತು.

Scanned with ACE Scanner

ತುಮಕೂರು ವಾರ್ತೆ
01.09.2018
ಶನಿವಾರ

# ನೇತ್ರ ದಾನ ಮಾಡುವುದು ಶ್ರೇಷ್ಠ ಕಾರ್ಯ

ತುಮಕೂರು: ಸಂಸ್ಕೃತ ಸುಭಾಷಿತವೊಂದು ಅನ್ನದಾನಂ ಪರಂ ದಾನಂ, ವಿದ್ಯಾದಾನಮತಃ ಪರಮ್ ಎಂದು ಹೇಳುತ್ತದೆ. ಅನ್ನದಾನ ಶ್ರೇಷ್ಠ, ವಿದ್ಯಾದಾನ ಇನ್ನೂ ಶ್ರೇಷ್ಠ ಎಂದು ಹೇಳುವ ಸುಭಾಷಿತವು ಅನ್ನದಾನಕ್ಕಿಂತ ವಿದ್ಯಾದಾನವು ಅದು ಹೇಗೆ ಶ್ರೇಷ್ಠ ಎಂಬ ವಿಷಯದ ಕುರಿತು ಜಿಜ್ಞಾಸುಗಳಿಗೆ ಮಾಹಿತಿ ನೀಡುತ್ತ ಅನ್ನದಾನದಿಂದ ಒಂದಷ್ಟು ಕಾಲ ಮಾತ್ರ ತೃಪ್ತಿ ದೊರಕುತ್ತದೆ. ಆದರೆ ವಿದ್ಯಾದಾನವು ನಿರಂತರ ತೃಪ್ತಿ ನೀಡುತ್ತದೆ. ಅನ್ನೇನ ಕ್ಷಣಿಕಾ ತೃಪ್ತಿಃ, ಯಾವಜ್ಜೀವಂ ಚ ವಿದ್ಯಯಾ ಅನ್ನದಾನದಿಂದ ಅಲ್ಪತೃಪ್ತಿ, ವಿದ್ಯಾದಾನದಿಂದ ಅನಂತತೃಪ್ತಿ ಎಂದು ಹಿರೇಮಠಾಧ್ಯಕ್ಷ ಡಾ.ಶಿವಾನಂದ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ನಗರದ ಸಿದ್ದಗಂಗಾ ಕಲಾ, ವಿಜ್ಞಾನ, ಮತ್ತು ವಾಣಿಜ್ಯ ಕಾಲೇಜಿನಲ್ಲಿ ನಡೆದ 33ನೇ ರಾಷ್ಟ್ರೀಯ ನೇತ್ರದಾನ ಪಾಕ್ಷಿಕಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರಕ್ತದಾನದಿಂದ ಸಾಯುವವರನ್ನು ಕಾಪಾಡುವ ಮೂಲಕ ಜೀವರಕ್ಷಕ ಎಂಬ ಗೌರವಕ್ಕೆ ಪಾತ್ರರಾಗಬಹುದು. ನೇತ್ರದಾನದಿಂದ ಸತ್ತ ನಂತರದಲ್ಲೂ ಶಾಶ್ವತವಾಗಿ ಇನ್ನೊಬ್ಬರ ನೇತ್ರಗಳನ್ನು ರಕ್ಷಣೆ ಮಾಡಿ ಅವರ ಕಣ್ಣಾಗುವ ಮೂಲಕ ಶಾಶ್ವತವಾಗಿ ನೇತ್ರರಕ್ಷಕ ಗೌರವಕ್ಕೆ ಭಾಜನರಾಗಬಹುದು. ನೇತ್ರದಾನವು ನಮ್ಮಗಳಿಗೆ ನಮ್ಮ ಮರಣೋತ್ತರ ಕಾಲದಲ್ಲೂ ದಾನಿಯಾಗಿ ಉಳಿಸಿಕೊಂಡು ಹೋಗುತ್ತದೆ. ನೇತ್ರದಾನ ಮರಣೋತ್ತರ ಕಾಲದಲ್ಲೂ ನಮ್ಮನ್ನು ದಾನಿಯಾಗಿಸುತ್ತದೆ. ನೇತ್ರದಾನದಿಂದ ನಾವು ಕಳೆದು ಕೊಳ್ಳುವುದೇನಿಲ್ಲ, ನೇತ್ರದಾನದಿಂದ ನಾವು ಪಡೆದುಕೊಳ್ಳುವುದೇ ಹೆಚ್ಚು, ಸತ್ತ ನಂತರ ಮಣ್ಣಲ್ಲಿ ಮಣ್ಣಾಗಿ ಹೋಗುವ ಕಣ್ಣುಗಳನ್ನು, ಸುಟ್ಟು ಬೂದಿಯಾಗಿ ಹೋಗುವ ಕಣ್ಣುಗಳನ್ನು ನಾವು ಸಾಯುವುದಕ್ಕೆ ಮೊದಲೇ ಮರಣಾ ನಂತರ ತೆಗೆದುಕೊಳ್ಳುವುದಕ್ಕೆ ಹೇಳಿದರೆ ನಮ್ಮ ಕಣ್ಣುಗಳು ಇನ್ನೊಬ್ಬರ ಬಾಳಿಗೆ ಕಣ್ಣಾಗುತ್ತವೆ ಎಂದರು.



ಕುರುಡು ಜೀವನವದು ಅದೆಷ್ಟು ದುರ್ಗಮ ಎಂಬುವುದು ಅನುಭವಿಸುವವರಿಗೆ ಮಾತ್ರ ಗೊತ್ತು. ಕಣ್ಣಿಲ್ಲದ ಕುರುಡು ಜೀವನ ಅದೊಂದು ಬಹುದೊಡ್ಡ ಚಾಲೆಂಜ್. ನಿಮ್ಮ ಕಣ್ಣುಗಳನ್ನು ಮರಣೋತ್ತರವಾಗಿ ದಾನಮಾಡುವ ಮೂಲಕ ಕುರುಡರ ಬಾಳಿಗೆ ಕಣ್ಣಾಗಿ. ಇರುವಾಗ ಬರೀ ಕಣ್ಣನ್ನಷ್ಟೇ ಅಲ್ಲ, ಏನನ್ನಾದರೂ ಸರಿ, ದಾನ ಮಾಡುವುದು ತುಂಬ ತುಂಬಾನೇ ಕಷ್ಟ. ಕಣ್ಣುಗಳು ಸತ್ತ ಮೇಲಾದರೂ ನಮ್ಮನ್ನು ದಾನ ಮಾಡಿ. ಆಗಲೂ ನಮ್ಮನ್ನು ದಾನ ಮಾಡಿದರೆ ನಾವು ನಿಮಗೆ ಪುಣ್ಯಾತ್ಮ ಎಂಬ ಪಟ್ಟ ಕಟ್ಟುತ್ತೇವೆ. ಹಾಗೆ ಮಾಡಿ ಪುಣ್ಯ ಕಟ್ಟಿಕೊಳ್ಳಿ. ಇರೋವಾಗ ಭಾರತರತ್ನರಾಗದಿದ್ದರೂ ಪರವಾ ಇಲ್ಲ, ಸತ್ತ ನಂತರವಾದರೂ ಸರಿ, ನಿಮ್ಮ ಕಣ್ಣುಗಳಾಗಿರುವ ನಮ್ಮನ್ನು ದಾನಮಾಡುವ ಮೂಲಕ ನೇತ್ರರತ್ನರಾಗಿ ಎಂದು ಹೇಳುತ್ತವೆ. ನಾವು-ನೀವುಗಳು ಚಿರಂಜೀವಿಗಳಾಗದಿದ್ದರೂ ಪರವಾ ಇಲ್ಲ, ಮರಣಾನಂತರ ನಮ್ಮ ಕಣ್ಣುಗಳನ್ನು ದಾನಮಾಡುವ ಮೂಲಕ ನಮ್ಮ, ನಿಮ್ಮ ಕಣ್ಣುಗಳನ್ನು ಚಿರಂಜೀವಿಯಾಗಿಸುವಾ ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಡಾ.ದಿನೇಶ್‌ಕುಮಾರ್ ಮಾತನಾಡಿ, ನೀವು ದಾನ ಮಾಡಿದ ನೇತ್ರಗಳು ಆರು ಜನರ ಬಾಳಿನ ಕುರುಡನ್ನು ಕಳೆದು ಹಾಕುತ್ತವೆ. ನಿಮ್ಮ ಮರಣಾ ನಂತರ ಕಣ್ಣುಗಳನ್ನು ಸಾಯಿಸುವುದು ಮತ್ತು ಜೀವಂತವಾಗಿಡುವುದು ನಿಮ್ಮ ಕೈಯಲ್ಲಿಯೇ ಇದೆ. ನೀವು ನೇತ್ರದಾನ ಮಾಡಿದರೆ ನೀವು ಸತ್ತ ನಂತರವೂ ನಿಮ್ಮ ಕಣ್ಣುಗಳು ಜೀವಂತವಾಗಿರುತ್ತದೆ ಎಂದು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಬಿ.ಆರ್.ಚಂದ್ರಿಕಾ ಮಾತನಾಡಿ, ಕಣ್ಣುಗಳು ಆಸ್ತಿ ಇದ್ದ ಹಾಗೆ. ಅವುಗಳನ್ನು ನೀವುಗಳು ಇರುವಾಗ ದಾನ ಮಾಡುವ ಅವಶ್ಯಕತೆ ಇಲ್ಲ. ನೀವು ಸತ್ತುಹೋದ ಮೇಲೆ ನಿಮ್ಮೊಂದಿಗೇನೇ ನಿಮ್ಮ ನೇತ್ರವೆಂಬ ಆಸ್ತಿ ತನ್ನ ಅಸ್ತಿತ್ವ ಕಳೆದುಕೊಂಡು ಸತ್ತು ಹೋಗಬಾರದು. ನಿಮ್ಮ ಮರಣಾನಂತರದ ಕಾಲದಲ್ಲೂ ನಿಮ್ಮ ಆಸ್ತಿ ಈ ಪ್ರಪಂಚದಲ್ಲಿ ಉಳಿದುಕೊಂಡಿರಬೇಕು ಎಂದರೆ ನೀವುಗಳು ನಿಮ್ಮ ಕಣ್ಣುಗಳನ್ನು ನಿಮ್ಮ ಮರಣಾನಂತರದ ಕಾಲದಲ್ಲಿ ದಾನಮಾಡಿ ಎಂದು ಹೇಳಿದರು.

ಜಿಲ್ಲಾಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ವೀರಭದ್ರಯ್ಯ ಮಾತನಾಡಿ, ತುಮಕೂರು ಜಿಲ್ಲಾ ಆಸ್ಪತ್ರೆಯು ಎಲ್ಲ ವಿಧವಾದ ಆಧುನಿಕ ತಂತ್ರಜ್ಞಾನ ಹೊಂದಿದೆ. ಆದರಲ್ಲೂ ಕಣ್ಣಿನ ವಿಷಯದಲ್ಲಿ ನಾವು ಬೆಂಗಳೂರಿನ ಯಾವುದೇ ಖಾಸಗಿ ಆಸ್ಪತ್ರೆಗಿಂತ ಹೆಚ್ಚು ಸಕ್ಷಮರಾಗಿದ್ದೇವೆ. ನಿಮ್ಮ ಮರಣಾನಂತರ ನೇತ್ರದಾನಕ್ಕೆ ನಾವು ನ್ಯಾಯ ಒದಗಿಸುತ್ತೇವೆ ಎಂದು ಹೇಳಿದರು.

ಹಿರಿಯ ನೇತ್ರತಜ್ಞ ಡಾ.ಕೆ.ಪಿ.ಕಲ್ಲೇಶ್ವರ ಮಾತನಾಡಿ, ಸತ್ತ ನಂತರ ನಮ್ಮ ಜೊತೆ ಯಾವ ಭೌತಿಕ ಆಸ್ತಿಯೂ ಬರುವುದಿಲ್ಲ. ಭೌತಿಕ ಆಸ್ತಿಯನ್ನೊಂದು ಮರಣಾ ನಂತರ ತೆಗೆದುಕೊಂಡು ಹೋಗಬೇಕೆಂದರೆ ನೇತ್ರದಾನ ಮಾಡಿ. ನೀವು ದಾನ ಮಾಡಿದ ನೇತ್ರಗಳು ನಿಮ್ಮ ಮರಣಾ ನಂತರ ಕಾಲದಲ್ಲೂ ನಿಮ್ಮ ಆಸ್ತಿಯಾಗಿ ಇನ್ನೊಬ್ಬರನ್ನು ರಕ್ಷಿಸಿಕೊಂಡಿರುತ್ತವೆ ಎಂದು ಹೇಳಿದರು.

ಪ್ರಾಂಶುಪಾಲರಾದ ಡಾ.ಆರ್.ಆನಂದಕುಮಾರಿ, ಜಿಲ್ಲಾ ಕುಷ್ಠರೋಗ, ಅಂಧತ್ವ, ಮಾನಸಿಕ ರೋಗ ನಿವಾರಣಾಧಿಕಾರಿ ಡಾ.ಎಂ.ಚೇತನ್ ಇತರರು ಇದ್ದರು.

Scanned with ACE Scanner

# ಕಣ್ಣು ದಾನ ಮಾಡಿ.. ಕುರುಡರ ಬಾಳಿಗೆ ಕಣ್ಣಾಗಿ

ತುಮಕೂರು

ನೇತ್ರದಾನವು ನಮ್ಮಗಳಿಗೆ ನಮ್ಮ 'ಮರಣೋತ್ತರ' ಕಾಲದಲ್ಲೂ ದಾನಿಯಾಗಿ ಉಳಿಸಿಕೊಂಡು ಹೋಗುತ್ತವೆ. ನೇತ್ರದಾನ ಮರಣೋತ್ತರ ಕಾಲದಲ್ಲೂ ನಮ್ಮನ್ನು ದಾನಿಯಾಗಿಸುತ್ತದೆ. ನೇತ್ರದಾನದಿಂದ ನಾವು ಕಳೆದು- ಕೊಳ್ಳುವುದೇನಿಲ್ಲ, ನೇತ್ರದಾನದಿಂದ ನಾವು ಪಡೆದುಕೊಳ್ಳುವುದೇ ಹೆಚ್ಚು. ಸತ್ತನಂತರ ಮಣ್ಣಲ್ಲಿ ಮಣ್ಣಾಗಿಹೋಗುವ ಕಣ್ಣುಗಳನ್ನು, ಸುಟ್ಟು ಬೂದಿಯಾಗಿಹೋಗುವ ಕಣ್ಣುಗಳನ್ನು ನಾವು ಸಾಯುವುದಕ್ಕೆ ಮೊದಲೇ ಮರಣಾನಂತರ ತೆಗೆದುಕೊಳ್ಳುವುದಕ್ಕೆ ಹೇಳಿದರೆ ನಮ್ಮ ಕಣ್ಣುಗಳು ಇನ್ನೊಬ್ಬರ ಬಾಳಿಗೆ ಕಣ್ಣಾಗುತ್ತವೆ ಎಂದು ಹಿರೇಮಠಾಧ್ಯಕ್ಷರಾದ ಡಾ. ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ನುಡಿದರು.


ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಂಧತ್ವ ನಿಯಂತ್ರಣ ವಿಭಾಗ, ಜಿಲ್ಲಾ ಆಸ್ಪತ್ರೆ, ಜಿಲ್ಲಾ ನೇತ್ರತಜ್ಞರ ಸಂಘ ತುಮಕೂರು ಮತ್ತು ಲಯನ್ಸ್ ಅಂತಾರಾಷ್ಟ್ರೀಯ ನೇತ್ರ ಭಂಡಾರ, ಬೆಂಗಳೂರು, ಎನ್. ಎಸ್. ಐ. ಫೌಂಡೇಶನ್, ತುಮಕೂರು, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ, ಮತ್ತು ವಾಣಿಜ್ಯ ಕಾಲೇಜು, ಎನ್. ಎಸ್. ಎಸ್. ಮತ್ತು ಎನ್. ಸಿ. ಸಿ. ವಿಭಾಗ) ತುಮಕೂರು ಈ ಎಲ್ಲ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಡೆದ 33ನೇ ರಾಷ್ಟ್ರೀಯ ನೇತ್ರದಾನ ಪಾಕ್ಷಿಕಾಚರಣೆ 2018-2019, ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿ ಆಶೀರ್ವಚನವನ್ನು ನೀಡುತ್ತಾ ಅವರು ಮಾತನಾಡುತ್ತಿದ್ದರು.

ಕುರುಡು ಜೀವನವದು ಅದೆಷ್ಟು ದುರ್ಗಮ ಎಂಬುವುದು ಅನುಭವಿಸುವವರಿಗೆ ಮಾತ್ರ ಗೊತ್ತು. ಕಣ್ಣಿಲ್ಲದ ಕುರುಡು ಜೀವನ ಅದೊಂದು ಬಹುದೊಡ್ಡ ಚಾಲೇಂಜ್. ನಿಮ್ಮ ಕಣ್ಣುಗಳನ್ನು ಮರಣೋತ್ತರವಾಗಿ ದಾನಮಾಡುವ ಮೂಲಕ ಕುರುಡರ ಬಾಳಿಗೆ ಕಣ್ಣಾಗಿ. ಇರುವಾಗ ಬರೀ ಕಣ್ಣನ್ನಷ್ಟೇ ಅಲ್ಲ, ಏನನ್ನಾದರೂ ಸರಿ, ದಾನಮಾಡುವುದು ತುಂಬ ತುಂಬಾನೇ ಕಷ್ಟ.

ಸಂಪನ್ಮೂಲ ವ್ಯಕ್ತಿಗಳಾದ ಡಾ. ದಿನೇಶಕುಮಾರ್ ಮಾತನಾಡುತ್ತ, ''ನೀವು ದಾನಮಾಡಿದ ನೇತ್ರಗಳು ಆರು ಜನಗಳ ಬಾಳಿನ ಕುರುಡನ್ನು ಕಳೆದುಹಾಕುತ್ತವೆ. ನಿಮ್ಮ ಮರಣಾನಂತರ ಕಣ್ಣುಗಳನ್ನು ಸಾಯಿಸುವುದು ಮತ್ತು ಜೀವಂತವಾಗಿಡುವುದು ನಿಮ್ಮ ಕೈಯಲ್ಲಿಯೇ ಇದೆ. ನೀವು ನೇತ್ರದಾನ ಮಾಡಿದರೆ ನೀವು ಸತ್ತನಂತರವೂ ನಿಮ್ಮ ಕಣ್ಣುಗಳು ಜೀವಂತವಾಗಿರುತ್ತದೆ'' ಎಂದು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಬಿ.ಆರ್. ಚಂದ್ರಿಕಾರವರು ಮಾತನಾಡುತ್ತ, ''ಕಣ್ಣುಗಳು ಆಸ್ತಿ ಇದ್ದ ಹಾಗೆ. ಅವುಗಳನ್ನು ನೀವುಗಳು ಇರುವಾಗ ದಾನಮಾಡುವ ಅವಶ್ಯಕತೆ ಇಲ್ಲ, ನೀವು ಸತ್ತುಹೋದ ಮೇಲೆ ನಿಮ್ಮೊಂದಿಗೇನೇ ನಿಮ್ಮ ನೇತ್ರವೆಂಬ ಆಸ್ತಿ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಸತ್ತುಹೋಗಬಾರದು ಎಂದು ಹೇಳಿದರು.

ಜಿಲ್ಲಾಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ. ವೀರಭದ್ರಯ್ಯ ಮಾತನಾಡುತ್ತ, ''ತುಮಕೂರು ಜಿಲ್ಲಾ ಆಸ್ಪತ್ರೆಯು ಎಲ್ಲ ವಿಧವಾದ ಆಧುನಿಕ ತಂತ್ರಜ್ಞಾನವನ್ನು ಹೊಂದಿದೆ ಎಂದು ಹೇಳಿದರು. ಹಿರಿಯ ನೇತ್ರತಜ್ಞ ಡಾ. ಕೆ. ಪಿ. ಕಲ್ಲೇಶ್ವರ, ಶ್ರೀ ಸಿದ್ಧಗಂಗಾ ಬಾಲಕರ ಪದವಿ ಕಾಲೇಜಿನ ಪ್ರಾಂಶುಪಾಲ ಡಾ. ಆರ್. ಆನಂದಕುಮಾರಿ ಜಿಲ್ಲಾ ಕುಷ್ಠರೋಗ, ಅಂಧತ್ವ ಮಾನಸಿಕ ರೋಗ ನಿವಾರಣಾಧಿಕಾರಿಗಳಾದ ಡಾ. ಎಮ್. ಚೇತನ್‌ರವರು ಸ್ವಾಗತ ಮಾಡುತ್ತ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಎನ್. ಎಸ್. ಎಸ್. ಮತ್ತು ಎನ್. ಸಿ. ಸಿ. ವಿಭಾಗದ ನೂರಾರು ಜನ ವಿದ್ಯಾರ್ಥಿ, ವಿದ್ಯಾರ್ಥಿನಿಯರು ನೇತ್ರದಾನಮಾಡುವ ಫಾರ್ಮುಗಳಿಗೆ ರುಜುಹಾಕುವ ಮೂಲಕ ಸಮಾರಂಭವನ್ನು ಯಶಸ್ವಿಯಾಗಿಸಿದರು.



## ಭಾರತರತ್ನರಾಗದಿದ್ದರೂ ಪರವಾಗಿಲ್ಲ;ನೇತ್ರರತ್ನರಾಗಿ

ಕುರುಡು ಜೀವನವದು ಅದೆಷ್ಟು ದುರ್ಗಮ ಎಂಬುವುದು ಅನುಭವಿಸುವವರಿಗೆ ಮಾತ್ರ ಗೊತ್ತು. ಕಣ್ಣಿಲ್ಲದ ಕುರುಡು ಜೀವನ ಅದೊಂದು ಬಹುದೊಡ್ಡ ಚಾಲೇಂಜ್. ನಿಮ್ಮ ಕಣ್ಣುಗಳನ್ನು ಮರಣೋತ್ತರವಾಗಿ ದಾನಮಾಡುವ ಮೂಲಕ ಕುರುಡರ ಬಾಳಿಗೆ ಕಣ್ಣಾಗಿ. ಇರುವಾಗ ಬರೀ ಕಣ್ಣನ್ನಷ್ಟೇ ಅಲ್ಲ, ಏನನ್ನಾದರೂ ಸರಿ, ದಾನಮಾಡುವುದು ತುಂಬ ತುಂಬಾನೇ ಕಷ್ಟ, ಕಣ್ಣುಗಳು ''ಸತ್ತ ಮೇಲಾದರೂ ನಮ್ಮನ್ನು ದಾನ ಮಾಡಿ. ಆಗಲೂ ನಮ್ಮನ್ನು ದಾನಮಾಡಿದರೆ ನಾವು ನಿಮಗೆ ಪುಣ್ಯಾತ್ಮ ಎಂಬ ಪಟ್ಟ ಕಟ್ಟುತ್ತೇವೆ. ಹಾಗೆ ಮಾಡಿ ಪುಣ್ಯ ಕಟ್ಟಿಕೊಳ್ಳಿ, ಇರೋವಾಗ ಭಾರತರತ್ನರಾಗದಿದ್ದರೂ ಪರವಾ ಇಲ್ಲ, ಸತ್ತ ನಂತರವಾದರೂ ಸರಿ, ನಿಮ್ಮ ಕಣ್ಣುಗಳಾಗಿರುವ ನಮ್ಮನ್ನು ದಾನಮಾಡುವ ಮೂಲಕ ನೇತ್ರರತ್ನರಾಗಿ.

■ ಡಾ. ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು

02.09.2018
ಪ್ರಜಾಪ್ರಗತಿ
[illegible]

10333

Scanned with ACE Scanner